ಸಂಪುಟ: 01 ಸಂಚಿಕೆ: 101 ಪುಟ: 04 ಬೆಲೆ: 02 ಭಾನುವಾರ ಸಪ್ಟೆಂಬರ್ 27 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 101 Pages:04 Price:02 SUNDAY SEPTEMBER 27 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಚೇತನ ಮತ್ತು ಅಚೇತನ ವಸ್ತು ಜೀವಗಳು ಮನುಷ್ಯನನ್ನು ಸಂವೇದನಶೀಲರನ್ನಾಗಿಸಿ ಇಡುತ್ತವೆ.



ವಾಣಿ ಭಂಡಾರಿ.

## ಎಐ ಕ್ಯಾಮೆರಾ ಎಡವಟ್ಟು :ಗಿಟಾರ್‌ಗೂ ಹಾಕಬೇಕಂತೆ ಹೆಲ್ಮೆಟ್..!

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ತಡೆಗೆ ಸಿಗ್ನಲ್‌ಗಳಲ್ಲಿ ಅಳವಡಿಸಲಾಗಿರುವ ಎಐ ಕ್ಯಾಮೆರಾಗಳಿಂದ ಎಡವಟ್ಟಿನ ಮೇಲೆ ಎಡವಟ್ಟುಗಳು ನಡೆಯುತ್ತಿದ್ದು, ಇದೀಗ ಗಿಟಾರ್ ಅನ್ನು ಹಿಂಬದಿ ಸವಾರನೆಂದು ಪರಿಗಣಿಸಿ ಹೆಲ್ಮೆಟ್ ಧರಿಸಿಲ್ಲ ಎಂದು ಚಲನ್ ಕಳುಹಿಸಿರುವ ಘಟನೆ ಬೆಳಕಿಗೆ ಬಂದಿದೆ.**



ಹೆಬ್ಬಾಳದ ಸೌವಿಕ್ ದತ್ ಎಂಬುವರು ಸ್ಕೂಟರ್‌ನಲ್ಲಿ ಗಿಟಾರ್ ಅನ್ನು ಬೆನ್ನಿಗೆ ಹಾಕಿಕೊಂಡು ಟಿನ್ ಫ್ಯಾಕ್ಟರಿ ಕಡೆಗೆ ತೆರಳುತ್ತಿದ್ದರು. ಮಾರ್ಗಮಧ್ಯೆ ಅಳವಡಿಸಲಾಗಿದ್ದ ಎಐ ಕ್ಯಾಮೆರಾ ಹಿಂಬದಿಯಲ್ಲಿದ್ದ ಗಿಟಾರ್ ಅನ್ನು ಹಿಂಬದಿ ಸವಾರನೆಂದು ಗುರುತಿಸಿ, ಹೆಲ್ಮೆಟ್ ಧರಿಸಿಲ್ಲ ಎಂದು ದಾಖಲಿಸಿದೆ. ಇದಕ್ಕೆ ಸಂಬಂಧಿಸಿದ ಫೋಟೋ ಸಮೇತ ಆನ್‌ಲೈನ್‌ನಲ್ಲಿ ಸ್ಕೂಟರ್ ಸವಾರನಿಗೆ ಚಲನ್ ರವಾನೆಯಾಗಿದೆ. ಚಲನ್ ನೋಡಿ ಸೌವಿಕ್ ದತ್ ಅವರು ಕೆಲಕಾಲ ಅಚ್ಚರಿಗೊಂಡಿದ್ದು, ಎಐ ಕ್ಯಾಮೆರಾದ ಎಡವಟ್ಟಿನ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಪೊಲೀಸರು, ಸೌವಿಕ್ ದತ್ ಅವರನ್ನು ತಮ್ಮನ್ನು ಸಂಪರ್ಕಿಸುವಂತೆ ಸೂಚಿಸಿದ್ದಾರೆ. ಇದೇ ರೀತಿ ಈ ಹಿಂದೆ ಕಾರು ಚಾಲನೆ ಮಾಡುತ್ತಿದ್ದ ವ್ಯಕ್ತಿಯೊಬ್ಬರಿಗೆ ಹೆಲ್ಮೆಟ್ ಧರಿಸಿಲ್ಲ ಎಂದು ಎಐ ಕ್ಯಾಮೆರಾ ಸೆರೆಹಿಡಿದು ಚಲನ್ ಕಳುಹಿಸಿತ್ತು ಎನ್ನಲಾಗಿದೆ. ಇದೀಗ ಗಿಟಾರ್ ಪ್ರಕರಣವೂ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಎಐ ಕ್ಯಾಮೆರಾದ ಎಡವಟ್ಟು ನಗೆಪಾಟಲಿಗೀಡಾಗಿದೆ.

## ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್‌ಗೆ

# ‘ಪದ್ಮಭೂಷಣ’ ನೀಡಲು ಬಿಜೆಪಿ ಆಗ್ರಹ

**ನವದೆಹಲಿ–ಪಶ್ಚಿಮ ಬಂಗಾಳದಲ್ಲಿ ಅಕ್ರಮ ಬಾಂಗ್ಲಾದೇಶಿ ನುಸುಳುಕೋರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆರವುಗೊಳಿಸಿ, ಹಿಂಸಾಚಾರ ರಹಿತ ಚುನಾವಣೆಗೆ ಹಾದಿಮಾಡಿಕೊಟ್ಟ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರಿಗೆ ದೇಶದ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ‘ಪದ್ಮಭೂಷಣ’ ನೀಡಿ ಗೌರವಿಸಬೇಕು ಎಂದು ಪಶ್ಚಿಮ ಬಂಗಾಳ ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಪ್ರತಿಪಾದಿಸಿದ್ದಾರೆ.**

ಚುನಾವಣಾ ಆಯೋಗದ (ECI) ಕಾರ್ಯವೈಖರಿ ಮತ್ತು ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯ ಸುತ್ತ ದೇಶಾದ್ಯಂತ ರಾಜಕೀಯ ಗದ್ದಲ ತೀವ್ರಗೊಂಡಿರುವ ಬೆನ್ನಲ್ಲೇ ಬಿಜೆಪಿ ಈ ಬಲವಾದ ಬೆಂಬಲ ವ್ಯಕ್ತಪಡಿಸಿದೆ. ಗಡಿ ರಾಜ್ಯವಾದ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಲ್ಲಿದ್ದ ಅಕ್ರಮ ಬಾಂಗ್ಲಾದೇಶಿ ನುಸುಳುಕೋರರ ಹೆಸರುಗಳನ್ನು ತೆಗೆದುಹಾಕಲು ಜ್ಞಾನೇಶ್ ಕುಮಾರ್ ದಿಟ್ಟ ಕ್ರಮ ಕೈಗೊಂಡಿದ್ದಾರೆ. ರಾಜ್ಯದಲ್ಲಿ ಬಹುಕಾಲದ ನಂತರ ಭೀತಿ ಮತ್ತು ಕೊಲೆ–ಹಿಂಸಾಚಾರಗಳಿಲ್ಲದೆ ಸಾರ್ವಜನಿಕರು ಮುಕ್ತವಾಗಿ ಮತ ಚಲಾಯಿಸಲು ಅವಕಾಶ ಸಿಕ್ಕಿದೆ.

**ವಿಪಕ್ಷಗಳ ವಾಗ್ದಾಳಿಗೆ ತಿರುಗೇಟು:** ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಸಿಇಸಿ ವಿರುದ್ಧ ದೇಶದ್ರೋಹದ ಆರೋಪ ಹೊರಿಸಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಹೇಳಿಕೆಗಳನ್ನು ತಳ್ಳಿಹಾಕಿದ ಭಟ್ಟಾಚಾರ್ಯ, ಚುನಾವಣೆಗಳಲ್ಲಿ ಅಕ್ರಮ ಎಸಗಿ ಪ್ರಜಾಪ್ರಭುತ್ವದ ಅಡಿಪಾಯವನ್ನೇ ಹಾಳುಮಾಡಿದ್ದಕ್ಕಾಗಿ ವಿಪಕ್ಷಗಳೇ ತನಿಖೆ ಎದುರಿಸಬೇಕಾಗುತ್ತದೆ ಎಂದಿದ್ದಾರೆ.

ಚುನಾವಣಾ ಆಯೋಗದ ಕಾರ್ಯವೈಖರಿ ಮತ್ತು `SIR' ಪ್ರಕ್ರಿಯೆಯ ಸಮಯದಲ್ಲಿ ಇಬ್ಬರು ಚುನಾವಣಾ ಆಯುಕ್ತರ ಸಮ್ಮತಿಯಿಲ್ಲದೆ ಏಕಪಕ್ಷೀಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂಬ ವರದಿಗಳ ನಂತರ ವಿಪಕ್ಷಗಳು ಕಟು ಟೀಕೆ ವ್ಯಕ್ತಪಡಿಸುತ್ತಿವೆ.ಸಿಇಸಿ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಹಾಗೂ ಕಾಕ್ರೋಚ್ ಜನತಾ ಪಕ್ಷ (CJP) ಸೇರಿದಂತೆ ವಿವಿಧ ವಿಪಕ್ಷಗಳು ಸೆಪ್ಟೆಂಬರ್ 25 ರಂದು ದೇಶಾದ್ಯಂತ ತೀವ್ರ ಪ್ರತಿಭಟನೆ ನಡೆಸಿದ್ದು, 48 ಗಂಟೆಗಳ ಗಡುವು ನೀಡಿದ್ದವು.



> ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗ ಕೈಗೊಂಡ ಕೆಲವು ನಿರ್ಧಾರಗಳು ಹಾಗೂ ಚುನಾವಣಾ ಸಂಬಂಧಿತ ಆದೇಶಗಳು, ಸಾಫ್ಟ್‌ವೇರ್ ಬದಲಾವಣೆಗಳ ಕುರಿತು ಇಬ್ಬರು ಚುನಾವಣಾ ಆಯುಕ್ತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂಬ ವರದಿಗಳು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿವೆ. ಮುಖ್ಯ ಚುನಾವಣಾ ಆಯುಕ್ತರು ಸೇರಿದಂತೆ ಮೂವರು ಚುನಾವಣಾ ಆಯುಕ್ತರ ನಡುವೆ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು ಎಂಬ ವರದಿಗಳ ಹಿನ್ನೆಲೆಯಲ್ಲಿ, ಆಯೋಗದ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಸ್ವರೂಪದ ಬಗ್ಗೆಯೂ ಪ್ರಶ್ನೆಗಳು ಎದ್ದಿವೆ. ಇದೇ ವಿಚಾರವನ್ನು ಉಲ್ಲೇಖಿಸಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ, ಅಧಿಕೃತ ಚರ್ಚೆಗಳಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿರುವುದು ಆಯೋಗದಲ್ಲಿ ಚರ್ಚೆ ನಡೆಯುತ್ತಿರುವುದಕ್ಕೆ ಸಾಕ್ಷಿ ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ: ಚುನಾವಣಾ ಆಯೋಗದ ತಂತ್ರಾಂಶ ಬದಲಾವಣೆ ಮತ್ತು ಆದೇಶಗಳನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ.

**ಬಿಜೆಪಿಯ ಸ್ಪಷ್ಟನೆ:** ಆಯೋಗದ ಸದಸ್ಯರ ನಡುವಿನ ಭಿನ್ನಾಭಿಪ್ರಾಯಗಳ ವರದಿಗಳನ್ನು ಉಲ್ಲೇಖಿಸಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ, ಇದು ಚುನಾವಣಾ ಆಯೋಗದ ಪ್ರಜಾಸತ್ತಾತ್ಮಕ ಕಾರ್ಯವೈಖರಿಯನ್ನು ಪ್ರತಿಬಿಂಬಿಸುತ್ತದೆ ಎಂದು ಸಮರ್ಥಿಸಿಕೊಂಡಿದ್ದಾರೆ ಎಸ್‌ಐಆರ್ ಸುತ್ತ ವಿವಾದ ಆದರೆ, ಭಟ್ಟಾಚಾರ್ಯ ಅವರ ಈ ಪ್ರಶಂಸೆ ಚುನಾವಣಾ ಆಯೋಗದ ಆಂತರಿಕ ಕಾರ್ಯವೈಖರಿ ಕುರಿತು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲೇ ಹೊರಬಂದಿದೆ.

ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗ ಕೈಗೊಂಡ ಕೆಲವು ನಿರ್ಧಾರಗಳು ಹಾಗೂ ಚುನಾವಣಾ ಸಂಬಂಧಿತ ಆದೇಶಗಳು, ಸಾಫ್ಟ್‌ವೇರ್ ಬದಲಾವಣೆಗಳ ಕುರಿತು ಇಬ್ಬರು ಚುನಾವಣಾ ಆಯುಕ್ತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂಬ ವರದಿಗಳು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿವೆ. ಮುಖ್ಯ ಚುನಾವಣಾ ಆಯುಕ್ತರು ಸೇರಿದಂತೆ ಮೂವರು ಚುನಾವಣಾ ಆಯುಕ್ತರ ನಡುವೆ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು ಎಂಬ ವರದಿಗಳ ಹಿನ್ನೆಲೆಯಲ್ಲಿ, ಆಯೋಗದ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಸ್ವರೂಪದ ಬಗ್ಗೆಯೂ ಪ್ರಶ್ನೆಗಳು ಎದ್ದಿವೆ.

ಇದೇ ವಿಚಾರವನ್ನು ಉಲ್ಲೇಖಿಸಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ, ಅಧಿಕೃತ ಚರ್ಚೆಗಳಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿರುವುದು ಆಯೋಗದಲ್ಲಿ ಚರ್ಚೆ ನಡೆಯುತ್ತಿರುವುದಕ್ಕೆ ಸಾಕ್ಷಿ ಎಂದು ಹೇಳಿದ್ದಾರೆ. ಮತದಾರರ ಪಟ್ಟಿಯ ಪರಿಷ್ಕರಣೆಯ ಉದ್ದೇಶ ಅರ್ಹ ಮತದಾರರ ಹಕ್ಕನ್ನು ರಕ್ಷಿಸುವುದೇ ಅಥವಾ ನಿರ್ದಿಷ್ಟ ವರ್ಗದ ಮತದಾರರನ್ನು ಹೊರಗಿಡುವುದೇ ಎಂಬ ವಿಚಾರ ಇದೀಗ ರಾಜಕೀಯ ಚರ್ಚೆಯ ಪ್ರಮುಖ ಅಂಶವಾಗಿದೆ. ‘ಅಕ್ರಮ ವಲಸಿಗರು’ ಎಂಬ ಆರೋಪದ ಆಧಾರ, ಹೆಸರುಗಳನ್ನು ತೆಗೆದುಹಾಕುವ ಪ್ರಕ್ರಿಯೆಯ ಕಾನೂನುಬದ್ಧ ವಿಧಾನ ಹಾಗೂ ಅಂತಿಮವಾಗಿ ಅರ್ಹ ಮತದಾರರಿಗೆ ತಮ್ಮ ಹೆಸರು ಮರುಸೇರಿಸಿಕೊಳ್ಳಲು ನೀಡಲಾಗುವ ಅವಕಾಶಗಳು ಈ ಚರ್ಚೆಯಲ್ಲಿ ನಿರ್ಣಾಯಕವಾಗಿವೆ.

ಈ ಬೆಳವಣಿಗೆಗಳ ನಡುವೆಯೇ ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ), ಅಭಿಜೀತ್ ದೀಪ್ಕೆ ನೇತೃತ್ವದಲ್ಲಿ, ಜ್ಞಾನೇಶ್ ಕುಮಾರ್ ಅವರು ಮುಖ್ಯ ಚುನಾವಣಾ ಆಯುಕ್ತ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದೆ. 48 ಗಂಟೆಗಳ ಗಡುವು ನೀಡಿರುವುದಾಗಿ ಸಂಘಟನೆ ಹೇಳಿದ್ದು, ಗಡುವಿನ ಬಳಿಕವೂ ಅವರು ಹುದ್ದೆಯಲ್ಲಿ ಮುಂದುವರಿದರೆ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದೆ. ಕಾಂಗ್ರೆಸ್ ಕೂಡ ಸೆಪ್ಟೆಂಬರ್ 25ರಂದು ದೇಶದ ವಿವಿಧೆಡೆ ಪ್ರತಿಭಟನೆ ನಡೆಸಿ, ಸಿಇಸಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿದೆ. ಚುನಾವಣಾ ಆಯೋಗದ ಕಾರ್ಯವೈಖರಿ, ಮತದಾರರ ಪಟ್ಟಿಯ ಪರಿಷ್ಕರಣೆ ಮತ್ತು ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ ಕುರಿತು ವಿರೋಧ ಪಕ್ಷಗಳು ನಿರಂತರವಾಗಿ ಪ್ರಶ್ನೆಗಳನ್ನು ಎತ್ತುತ್ತಿವೆ.

## ಹಿಂದೂಗಳು ಏಕಾಗ್ರತೆಯಿಂದ ಒಂದಾಗಬೇಕು: ಶ್ರೀ ವಿದ್ಯಾ ಕಣ್ವವಿರಾಜ ತೀರ್ಥರು





ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಧರ್ಮದ ವಿಚಾರದಲ್ಲಿ ಹಿಂದೂ ಧರ್ಮಕ್ಕೆ ವಿಶಿಷ್ಟ ಸ್ಥಾನವಿದ್ದು, ಭಾರತ ಮತ್ತು ಹಿಂದೂ ಸಂಸ್ಕೃತಿ ಪರಸ್ಪರ ಅವಿನಾಭಾವ ಸಂಬಂಧ ಹೊಂದಿವೆ. ದೇಶದಲ್ಲಿ ವಿವಿಧ ಆಚರಣೆ, ಭಾಷೆ ಹಾಗೂ ಸಂಪ್ರದಾಯಗಳಿದ್ದರೂ ಹಿಂದೂಗಳು ಏಕಾಗ್ರತೆಯಿಂದ ಒಂದಾಗಬೇಕು ಎಂದು ಹುಣಸೆಹೊಳೆ ಕಣ್ವಮಠದ ಪೀಠಾಧಿಪತಿಗಳಾದ ಶ್ರೀ ವಿದ್ಯಾ ಕಣ್ವವಿರಾಜ ತೀರ್ಥ ಪಾದಂಗಳವರು ಹೇಳಿದರು.**

ಪಟ್ಟಣದ ಮಾರುತಿನಗರದ ಶ್ರೀ ಶಿವಚಿದಂಬರೇಶ್ವರ ದೇವಸ್ಥಾನದಲ್ಲಿ ಆಗಸ್ಟ್ 8ರಿಂದ ಸೆಪ್ಟೆಂಬರ್ 26ರವರೆಗೆ ನಡೆದ 7ನೇ ಚಾತುರ್ಮಾಸ್ಯ ವ್ರತದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಹಿಮಾಲಯದಿಂದ ಹರಿದು ಬಂದ ಗಂಗೆ ಸೇರಿದಂತೆ ಗಂಗೆ, ತುಂಗೆ, ಕೃಷ್ಣೆ, ಕಾವೇರಿ ಮೊದಲಾದ ನದಿಗಳು ಭಾರತೀಯ ಸಂಸ್ಕೃತಿಯೊಂದಿಗೆ ನಿಕಟ ಸಂಬಂಧ ಹೊಂದಿವೆ. ಪವಿತ್ರ ಜಲ, ಸಂಸ್ಕೃತಿ ಹಾಗೂ ಪರಂಪರೆಯಲ್ಲಿ ಹಿಂದೂ ಧರ್ಮದ ಅಂಶಗಳು ಬೆರೆತಿವೆ ಎಂದು ಅವರು ಹೇಳಿದರು.

ಮತಾಂತರ ಮತ್ತು ಭಯೋತ್ಪಾದನೆಯಂತಹ ದುಷ್ಟ ಶಕ್ತಿಗಳಿಗೆ ಅವಕಾಶ ನೀಡದಂತೆ ಸಮಾಜದಲ್ಲಿ ಏಕತೆ, ಧಾರ್ಮಿಕ ಪ್ರಜ್ಞೆ ಹಾಗೂ ಸದ್ಭಾವನೆ ಬೆಳೆಸಿಕೊಳ್ಳಬೇಕು. ದ್ವೇಷ, ಅಸೂಯೆ ಹಾಗೂ ಮತ್ಸರದಂತಹ ದುಷ್ಟ ಭಾವನೆಗಳು ಸಮಾಜಕ್ಕೆ ಹಾನಿಕಾರಕವಾಗಿದ್ದು, ಅವುಗಳಿಂದ ದೂರವಿರಬೇಕು ಎಂದು ತಿಳಿಸಿದರು. ಯಾವುದೇ ಆಚರಣೆ ಪಾಲಿಸಿದರೂ, ಯಾವ ಭಾಷೆ ಮಾತನಾಡಿದರೂ, ವಿವಿಧ ಸಂಪ್ರದಾಯಗಳನ್ನು ಅನುಸರಿಸಿದರೂ ಭಾರತೀಯ ಹಿಂದೂ ಪರಂಪರೆಯೊಂದಿಗೆ ಜನರು ಹೊಂದಿರುವ ಸಂಬಂಧವನ್ನು ಅರಿತುಕೊಳ್ಳಬೇಕು. ಗೋ ಪೂಜೆಯ ಮಹತ್ವವನ್ನು ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ವಿಶೇಷವಾಗಿ ಕಾಣಲಾಗಿದೆ ಎಂದರು. ವಿವಿಧ ಧಾರ್ಮಿಕ ಕಾರ್ಯಕ್ರಮಗಳು 50 ದಿನಗಳ ಕಾಲ ನಡೆದ ಚಾತುರ್ಮಾಸ್ಯ ವ್ರತದಲ್ಲಿ ಪ್ರತಿದಿನ ಶ್ರೀಗಳಿಗೆ ಪಾದಪೂಜೆ, ಭಜನೆ, ಉಪನ್ಯಾಸ, ಹಸ್ತೋದಕ, ತೊಟ್ಟಿಲು ಪೂಜೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸುಪ್ರಭಾತ ಸೇವೆ, ನೈರ್ಮಲ್ಯ ಪೂಜೆ, ಗುರುಗಳಿಗೆ ಪಾದಪೂಜೆ, ಶ್ರೀಗಳಿಂದ ಸಂಸ್ಥಾನ ಪೂಜೆ, ನೈವೇದ್ಯ, ಗುರುಗಳಿಗೆ ಭಿಕ್ಷೆ ಹಾಗೂ ಭಕ್ತರಿಗೆ ತೀರ್ಥ, ಪ್ರಸಾದ ಮತ್ತು ಮಂತ್ರಾಕ್ಷತೆ ವಿತರಣೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ವಿಷ್ಣು ಸಹಸ್ರನಾಮ ಪಠಣ, ಭಕ್ತಿಗೀತೆಗಳ ಗಾಯನದೊಂದಿಗೆ ಮಹಾಪೂಜೆ ನೆರವೇರಿಸಲಾಯಿತು. ಶ್ರೀಗಳು ಭಕ್ತರಿಗೆ ತಪ್ತಮುದ್ರಾಧಾರಣೆ ಮಾಡಿದರು. ಗುರುಗಳ ತುಲಾಭಾರ, ನಿತ್ಯ ಉಪಾಕರ್ಮ ಹಾಗೂ ಕೃಷ್ಣಜಯಂತಿ ಕಾರ್ಯಕ್ರಮಗಳೂ ಜರುಗಿದವು. ಚಾತುರ್ಮಾಸ್ಯ ವ್ರತದ ಸಮಾರೋಪದ ಅಂಗವಾಗಿ ಶನಿವಾರ ಸೀಮೋಲ್ಲಂಘನ ಕಾರ್ಯಕ್ರಮ ಹಾಗೂ ಸಮಾರೋಪ ಸಮಾರಂಭ ನಡೆಯಿತು. ಕಾರ್ಯಕ್ರಮದಲ್ಲಿ ಕಣ್ವಮೂಲಮಠದ ಟ್ರಸ್ಟಿ ರಾಜಗೋಪಾಲ್ ಕುಲಕರ್ಣಿ, ಕಾರ್ಯದರ್ಶಿ ರಾಘವೇಂದ್ರ ಆಲಗೂರ, ಮುದ್ದೇಬಿಹಾಳ ವಿಪ್ರ ಸಮಾಜದ ಗುಂಡಭಟ್ಟ ಜೋಶಿ, ಕೆ.ಬಿ. ದೇಶಪಾಂಡೆ, ವಾಸುದೇವ ಶಾಸ್ತ್ರಿ, ಸಿ.ಬಿ. ಕುಲಕರ್ಣಿ, ಶಂಕರಭಟ್ಟ ಜೋಶಿ, ವೆಂಕಟೇಶಾಚಾರ್ಯ ಗ್ರಾಮಪುರೋಹಿತ, ವಿನಾಯಕರಾವ್ ಕುಲಕರ್ಣಿ, ಅನೀಲ್ ಕುಲಕರ್ಣಿ, ಬಾಪುರಾವ್ ದೇಸಾಯಿ, ಕೃಷ್ಣಾಜಿ ಕುಲಕರ್ಣಿ, ಪುಟ್ಟು ಕುಲಕರ್ಣಿ, ಪ್ರದೀಪ ಕುಲಕರ್ಣಿ, ಮುರಹರಿ ದೇಶಪಾಂಡೆ, ರಾಘವೇಂದ್ರ ಕುಲಕರ್ಣಿ (ಆಲೂರ), ನಾರಾಯಣ ಕುಲಕರ್ಣಿ, ಶೇಷಗಿರಿರಾವ್ ದೇಸಾಯಿ, ಅರವಿಂದ ದೇಶಪಾಂಡೆ, ಅಣ್ಣಾರಾವ್ ದೇಶಪಾಂಡೆ, ವಾಸುದೇವ ಸಾಲವಾಡಗಿ, ಸುಭಾಷ್ ಕುಲಕರ್ಣಿ ಸೇರಿದಂತೆ ಬ್ರಾಹ್ಮಣ ಸಮಾಜದ ಗಣ್ಯರು, ಮಹಿಳೆಯರು, ಮಕ್ಕಳು ಹಾಗೂ ವಿವಿಧ ಹಿಂದೂ ಸಮಾಜದ ಬಾಂಧವರು ಭಾಗವಹಿಸಿದ್ದರು.

## ಬೆಳೆ ಹಾನಿ ಪರಿಹಾರ ವಿತರಣೆಗೆ ಎಫ್‌ಐಡಿ ಕಡ್ಡಾಯ

ಅ.ಶ. ಸುದ್ದಿ ಇಂಡಿ

**ಇಂಡಿ: ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ಎನ್ ಡಿ ಆರ್ ಎಫ್ ಅನುದಾನ ನೀರಿಕ್ಷೆಯೊಂದಿಗೆ ಪ್ರತಿಯೊಬ್ಬ ಕೃಷಿಕನಿಗೆ 2500 ರೂ ಇನುಪುಟ್ ಸಬ್ಸಿಡಿ ನೀಡಲು ಸರಕಾರ ನಿರ್ಧರಿಸಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಸರಕಾರದ ಮಾರ್ಗಸೂಚಿಯನ್ವಯ ಈ ಪರಿಹಾರ ಸೌಲಭ್ಯವನ್ನು ಎಫ್ ಐಡಿ ಹೊಂದಿರುವ ಅರ್ಹ ರೈತರಿಗೆ ಮಾತ್ರ ಒದಗಿಸಲಾಗುವದು.**



ತಾಲೂಕಿನಲ್ಲಿ ಒಟ್ಟು 98987 ಸರ್ವೇ ನಂಬರಗಳಿವೆ. ಈ ಪೈಕಿ 76667 ಜಮೀನುಗಳು ಶೇ 77.45ಎಫ್ ಐಡಿಗೆ ಜೋಡಿಸಲಾಗಿದೆ. ಇನ್ನು 22320 ಜಮೀನುಗಳಿಗೆ ಬಾಕಿ ಉಳಿದಿವೆ. ಸಂಬಂದಿತ ರೈತರು ಕೂಡಲೇ ಎಫ್ ಐಡಿ ಜೋಡನೆ ಮಾಡಿಸಬೇಕು. ಎಫ್ ಐಡಿ ಹೊಂದಿರುವ ರೈತರು ತಮ್ಮ ಪಹಣಿ ಆಧಾರ ಕಾರ್ಡ ಹಾಗೂ ಬ್ಯಾಂಕ ಪಾಸ ಬುಕ್ ಗಳೊಂದಿಗೆ ಸಮೀಪದ ರೈತ ಸಂಪರ್ಕ ಕೇಂದ್ರ ತೋಟಗಾರಿಕೆ ಪಶು ಸಂಗೋಪನಾ ಇಲಾಖೆ ಅಥವಾ ಕಂದಾಯ ಇಲಾಖೆ ಕಚೇರಿಗೆ ಭೇಟಿ ಎಫ್ ಐಡಿ ಸೃಜಿಸಿಕೊಳ್ಳಬೇಕುಅದೇ ರೀತಿ ಈಗಾಗಲೇ ಎಫ್ ಐಡಿ ಹೊಂದಿರುವ ರೈತರು ತಮ್ಮ ಹೆಸರಿನಲ್ಲಿರುವ ಎಲ್ಲಾ ಸರ್ವೇ ನಂಬರಗಳಿಗೆ ಸಂಬಂದಿಸಿದ ಎಫ್ ಐಡಿ ಜೋಡಣೆಯಾಗಿರುವದನ್ನು ಖಚಿತಪಡಿಸಿಕೊಳ್ಳಬೇಕು.

ಎಫ್ ಐಡಿಗೆ ಜೋಡಣೆಯಾಗಿರುವ ಸರ್ವೇ ನಂಬರಗಳಿದ್ದಲ್ಲಿ ಸಂಬಂದಿಸಿದ ಇಲಾಖೆ ಮೂಲಕ ಅವುಗಳನ್ನು ಕೂಡಲೇ ಎಫ್ ಐಡಿಗೆ ಜೋಡಿಸಿಕೊಳ್ಳಬೇಕು. ಬರ ಪರಿಹಾರದ ಸೌಲಭ್ಯ ಪಡೆಯುವಲ್ಲಿ ಯಾವದೇ ರೀತಿಯ ವಿಳಂಬ ಉಂಟಾಗದಂತೆ ತಾಲೂಕಿನ ರೈತರುಈ ಪ್ರಕ್ರಿಯೆ ಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಬೇಕು ಎಂದು ಉಪ ಕೃಷಿ ನಿರ್ದೇಶಕರು ಚಂದ್ರಕಾಂತ ಪವಾರ ತಿಳಿಸಿದ್ದಾರೆ.

## ರೈತಪರ ಸಂಘಟನೆಗಳ ಕೆರೆ ತುಂಬಿಸುವ ಹೋರಾಟಕ್ಕೆ ಬಿ.ಡಿ. ಪಾಟೀಲ ಬೆಂಬಲ

ಅ.ಶ. ಸುದ್ದಿ ಇಂಡಿ

**ಇಂಡಿ: ಇಂಡಿ ತಾಲೂಕಿನ ಸಮಗ್ರ ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ಭಾರತೀಯ ಕಿಸಾನ್ ಸಂಘ ಹಾಗೂ ವಿವಿಧ ರೈತಪರ ಸಂಘಟನೆಗಳ ವತಿಯಿಂದ ಜೋಡಗುಡಿಯ ವಿಜಯಪುರ?ಇಂಡಿ ಮುಖ್ಯರಸ್ತೆಯ ಅಂಚಿನಲ್ಲಿ ಹಮ್ಮಿಕೊಂಡಿದ್ದ ಹೋರಾಟಕ್ಕೆ ಜೆಡಿ–ಎಸ್ ಮುಖಂಡರಾದ ಬಿ.ಡಿ. ಪಾಟೀಲ ಅವರು ಬೆಂಬಲ ವ್ಯಕ್ತಪಡಿಸಿದರು.**



ಈ ಸಂದರ್ಭದಲ್ಲಿ ಮಾತನಾಡಿದ ಅವರು, “ಹಿಂಗಾರು ಹಾಗೂ ಮುಂಗಾರು ಸಂಪೂರ್ಣ ಹಾಳಾಗಿದ್ದು, ಮಳೆಯ ಕೊರತೆಯಿಂದ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ರೈತರ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗಿರುವುದರಿಂದ ಕೂಡಲೇ ಗೋಶಾಲೆಗಳನ್ನು ಆರಂಭಿಸಬೇಕು” ಎಂದು ಆಗ್ರಹಿಸಿದರು. ಮಹಾರಾಷ್ಟ್ರದಲ್ಲಿ ಉತ್ತಮ ಮಳೆಯಾಗಿದ್ದು, ಆಲಮಟ್ಟಿ ಅಣೆಕಟ್ಟು ಸಂಪೂರ್ಣ ಭರ್ತಿಯಾಗಿದೆ. ಇಂತಹ ಸಂದರ್ಭದಲ್ಲಿ ಇಂಡಿ ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸಬೇಕು. ಕೆರೆಗಳು ತುಂಬಿದರೆ ಹಳ್ಳ–ಕೊಳ್ಳಗಳು ಹಾಗೂ ಬಾವಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿ, ಕುಡಿಯುವ ನೀರು ಹಾಗೂ ಕೃಷಿಗೆ ಅನುಕೂಲವಾಗಲಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಹಾಗೂ ಜನಪ್ರತಿನಿಧಿಗಳು ಕೂಡಲೇ ಕ್ರಮ ಕೈಗೊಂಡು ತಾಲೂಕಿನ ಕೆರೆಗಳಿಗೆ ನೀರು ತುಂಬಿಸಬೇಕು ಎಂದು ಒತ್ತಾಯಿಸಿದರು.

ರೈತರ ನ್ಯಾಯಬದ್ಧ ಬೇಡಿಕೆಗಳನ್ನು ನಿರ್ಲಕ್ಷಿಸದೆ ತುರ್ತಾಗಿ ಸ್ಪಂದಿಸಬೇಕು. ಜಾನುವಾರುಗಳ ರಕ್ಷಣೆಗಾಗಿ ಗೋಶಾಲೆ ಆರಂಭಿಸುವುದು ಸೇರಿದಂತೆ ರೈತರ ಸಂಕಷ್ಟಕ್ಕೆ ಸರ್ಕಾರ ಕೂಡಲೇ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬಿ.ಡಿ. ಪಾಟೀಲ ಆಗ್ರಹಿಸಿದರು. ಈ ಸಂದರ್ಭದಲ್ಲಿ ಗುರುನಾಥ ಬಗಲಿ, ಶಾಂತಪ್ಪ ಖಸ್ಕಿ, ರಾಮಣ್ಣ ತಳವಾರ, ವಿಶ್ವನಾಥ ನೇಕಾರ, ಗುರಣ್ಣ ಬಿರಾದಾರ, ನಿಂಗಪ್ಪ ಪಾತಾಳಿ, ಶೇಖಪ್ಪ ಬಿರಾದಾರ, ಲಾಲಸಾಬ ಹೂಗಾರ, ಮಂಜುನಾಥ ತೇಲಿ, ರವಿ ಮಸಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಲ್ಲೂರಿನಲ್ಲಿ ಅ.5ರಂದು ವಿರುಪಾಕ್ಷೇಶ್ವರ ಸ್ವಾಮಿಗಳ ನೂತನ ಶಿಲಾಮಂಟಪ ಲೋಕಾರ್ಪಣೆ

## ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜನಜಾಗೃತಿ ಧರ್ಮಸಭೆ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಸುಕ್ಷೇತ್ರ ಕಲ್ಲೂರು ಗ್ರಾಮದ ಹಿರೇಮಠದಲ್ಲಿ ಕರ್ತೃ ಶ್ರೀ ಗುರು ವಿರುಪಾಕ್ಷೇಶ್ವರ ಮಹಾಸ್ವಾಮಿಗಳ ನೂತನ ಶಿಲಾಮಂಟಪ ಲೋಕಾರ್ಪಣೆ, ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜನಜಾಗೃತಿ ಧರ್ಮಸಭೆ ಅಕ್ಟೋಬರ್ 5ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.**

ಸೆ.26 ಶನಿವಾರ ದಂದು ಕಾರ್ಯಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಮೃತ್ಯುಂಜಯ ಹಿರೇಮಠ, ಅ.5ರಂದು ಪ್ರಾತಃಕಾಲ ನೂತನ ಶಿಲಾಮಂಟಪದಲ್ಲಿ ವಾಸ್ತುಶಾಂತಿ, ಹೋಮ-ಹವನಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ನಂತರ ಬೆಳಗ್ಗೆ 9 ಗಂಟೆಗೆ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವವು ಪೂರ್ಣಕುಂಭ, ಕಳಸ, ಕನ್ನಡಿ ಹಾಗೂ ಸಕಲ ವಾದ್ಯ ವೈಭವ ಮತ್ತು ಕಲಾ ಮೇಳದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆಯ ಮೂಲಕ ನಡೆಯಲಿದೆ. ಬಳಿಕ ನೂತನ ಶಿಲಾಮಂಟಪ ತಲುಪಿ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ ಎಂದು ತಿಳಿಸಿದರು.



ನಂತರ ಪೂರ್ಣಾಹುತಿ ಹಾಗೂ ನೂತನ ಶಿಲಾಮಂಟಪದ ಲೋಕಾರ್ಪಣೆ ನೆರವೇರಲಿದ್ದು, ಬೆಳಗ್ಗೆ 11 ಗಂಟೆಗೆ ಜನಜಾಗೃತಿ ಧರ್ಮಸಭೆ ನಡೆಯಲಿದೆ. ಶ್ರೀ ವೀರಯ್ಯ ಸ್ವಾಮಿಗಳ ಸಂಕಲ್ಪದಂತೆ ಧರ್ಮಸಭೆ ಸೇ-ರಿದಂತೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ. ಸೆ.15ರಿಂದ ಪುರಾಣ ಪ್ರವಚನ ನೂತನ ಶಿಲಾಮಂಟಪದ ಲೋಕಾರ್ಪಣೆ ಅಂಗವಾಗಿ ಸೆಪ್ಟೆಂಬರ್ 15ರಿಂದ ಶ್ರೀ ಶರಣಬಸವೇಶ್ವರ ಪುರಾಣ ಪ್ರವಚನ ಕಾರ್ಯಕ್ರಮ ನಡೆಯುತ್ತಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮಹಾಪ್ರಸಾದದ ವ್ಯವಸ್ಥೆ ಮಾಡಲಾಗಿದೆ.

ದಿವ್ಯ ಸಾನಿಧ್ಯ ಜನಜಾಗೃತಿ ಧರ್ಮಸಭೆಯಲ್ಲಿ ಶ್ರೀಮದ್ ರಂಭಾಪುರಿ ವೀರ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಬಾಳೆಹೊನ್ನೂರು ದಿವ್ಯ ಸಾನಿಧ್ಯ ವಹಿಸುವರು. ಶ್ರೀ ವೇದಮೂರ್ತಿ ವೀರಯ್ಯ ಸ್ವಾಮಿಗಳು, ಹಿರೇಮಠ ಕಲ್ಲೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಶ್ರೀ ಷಟಸ್ಥಲ ಬ್ರಹ್ಮ ಶಿವಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು, ಪಂಚಗೃಹ ಹಿರೇಮಠ, ಸುಳ್ಳ ನೇತೃತ್ವ ವಹಿಸುವರು.

ಗುರುಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ ಶಿರಕೋಳ; ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಮೈಸೂರು?ಬನ್ನಿಕೊಪ್ಪ; ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಯಲಬುರ್ಗಾ; ಬಸವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಯಲಬುರ್ಗಾ; ವೀರ ಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ ಚಳಗೇರಿ; ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು, ಬ್ರಹನ್ಮಠ ರಾಜೂರು; ಡಾ. ಕಲ್ಲಯ್ಯ ಅಜ್ಜನವರು, ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ ಸೇರಿದಂತೆ ವಿವಿಧ ಮಠಾಧೀಶರು ದಿವ್ಯ ಸಾನಿಧ್ಯ ವಹಿಸುವರು.

ಸೇವಾದಾನಿಗಳಿಗೆ ಗುರುರಕ್ಷೆ ಕಾರ್ಯಕ್ರಮದ ಸೇವಾದಾನಿಗಳಾದ ಅಡವೆಪ್ಪ ದೊಡ್ಡಪ್ಪ ಕ್ಯಾದಗುಂಪಿ, ಕಲ್ಲೂರು; ಶಿವರತ್ನಮ್ಮ?ಮೃತ್ಯುಂಜಯ ಹಿರೇಮಠ, ಕಲ್ಲೂರು; ರಾಜೇಶ್ವರಿ?ಶಶಿಧರ ಸ್ವಾಮಿ ಹಿರೇಮಠ, ಹೊಸಪೇಟೆ ಸೇರಿದಂತೆ ವಿಶೇಷ ಸೇವಾರ್ಥಿಗಳಿಗೆ ಗುರುರಕ್ಷೆ ನೆರವೇರಿಸಲಾಗುವುದು ಎಂದು ಮೃತ್ಯುಂಜಯ ಹಿರೇಮಠ ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಠದ ಸದ್ಭಕ್ತ ಪ್ರಭು ಸೋಂಪುರ, ಕಲ್ಲೂರು ಹಿರೇಮಠದ ಶ್ರೀ ಗುರು ವಿರುಪಾಕ್ಷೇಶ್ವರ ಮಹಾಸ್ವಾಮಿಗಳ ನೂತನ ಶಿಲಾಮಂಟಪ ಲೋಕಾರ್ಪಣೆ, ಶ್ರೀ ವೀರಸಿಂಹಾಸನಾಧೀಶ್ವರ ಜಗದ್ಗುರು ವೀರ ಸೋಮೇಶ್ವರ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜನಜಾಗೃತಿ ಧರ್ಮಸಭೆಯಲ್ಲಿ ವಿವಿಧ ಹರಗುರು ಚರಮೂರ್ತಿಗಳ ಆಶೀರ್ವಾದ ಸಂದೇಶಗಳೊಂದಿಗೆ ಪವಿತ್ರ ಧರ್ಮ ಸಮಾರಂಭ ನಡೆಯಲಿದೆ. ಸರ್ವ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತನು, ಮನ, ಧನದಿಂದ ಸೇವೆ ಸಲ್ಲಿಸಿ ಜಗದ್ಗುರುಗಳ ಕೃಪೆಗೆ ಪಾತ್ರರಾಗಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ವೀರಭದ್ರಯ್ಯ ಪಂಚಗೃಹ ಹಿರೇಮಠ, ಸಿದ್ದಲಿಂಗಯ್ಯ ಸ್ವಾಮಿ ಹಿರೇಮಠ ಕುಕನೂರು, ಕಲ್ಲಯ್ಯ ಹೊಸಮನಿ, ಹನುಮಪ್ಪ ಅಗಶಿಮನಿ, ದೇವಪ್ಪ ಸೇರಿದಂತೆ ಮಠದ ಸದ್ಭಕ್ತರು ಉಪಸ್ಥಿತರಿದ್ದರು.

## ಚಿಕ್ಕಮಾದಿನಾಳದಲ್ಲಿ ಪ್ರಜಾ ಸೇವಾ ಆಂದೋಲನ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನ ಚಿಕ್ಕಮಾದಿನಾಳ ಗ್ರಾಮದಲ್ಲಿ ಸೆಪ್ಟೆಂಬರ್ 26ರಂದು ಶನಿವಾರ ತಹಶೀಲ್ದಾರ್ ಚಂದ್ರಶೇಖರ್ ಶಂಬಣ್ಣ ಗಾಳಿ ಅವರ ಅಧ್ಯಕ್ಷತೆಯಲ್ಲಿ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿ, ಗ್ರಾಮಸ್ಥರಿಂದ ಅಹವಾಲುಗಳನ್ನು ಸ್ವೀಕರಿಸಿದರು.**



ಗ್ರಾಮಸ್ಥರು ತಮ್ಮ ಸಮಸ್ಯೆಗಳನ್ನು ಅಧಿಕಾ-ರಿಗಳ ಗಮನಕ್ಕೆ ತಂದಿದ್ದು, ಸಂಬಂಧಪಟ್ಟ ಇಲಾಖೆಗಳ ಮೂಲಕ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾ-ರಿಗಳಿಗೆ ಸೂಚಿಸಲಾಯಿತು. ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸಾರ್ವಜನಿಕ ಸೇವೆಗಳ ಕುರಿತು ಗ್ರಾಮಸ್ಥ-ರಿಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮದ ಉದ್ದೇಶ ಗ್ರಾಮಸ್ಥರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಆಲಿಸಿ, ಸಾಧ್ಯವಾದಷ್ಟು ಶೀಘ್ರವಾಗಿ ಪರಿಹಾರ ಒದಗಿಸುವುದಾಗಿದೆ ಎಂದು ಅಧಿಕಾ-ರಿಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತಿ ಇಒ ರಾಜಶೇಖರ್, ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು.

### ‘ವಚನಾಮೃತ’

**ದೇಶವ ತಿರುಗದೆ ಕೋಶವನೋದದೆ
ಮಾಸಿಹುದು ಎನ ಶ್ವಾಸದೊಳ್
ಅಡಗಿಹ ಜ್ಞಾನದಗುಳು ನೋಡಾ!.
ತೇಲಿ ಬಂದುದನ್ನೆಲ್ಲ
ಬಾಚಿಕೊಳಲಾಗದೆ ಮುಳುಗಿರುವ
ನೀರೊಳಗಿಹ ಕಲ್ಲಾಗಿ ಸತ್ಯವಾಣಿ!!.**



ವಾಣಿ ಭಂಡಾರಿ.

# 29ನೇ ವರ್ಷವೂ ಮುಂದುವರಿದ ಯಮನೂರು ಸ್ವಾಮಿ ಯುವಕ ಸಂಘದ ಗಣೇಶೋತ್ಸವ; ಅನ್ನ ಸಂತರ್ಪಣೆ

## ಗಣೇಶೋತ್ಸವದಲ್ಲಿ ಭಾವೈಕ್ಯತೆ ಮೆರೆದ ಯಮನೂರು ಸ್ವಾಮಿ ಯುವಕ ಸಂಘ

ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣದ ಬಸ್ ನಿಲ್ದಾಣದ ಪಕ್ಕದಲ್ಲಿರುವ 10ನೇ ವಾರ್ಡಿನ ಯಮನೂರು ಸ್ವಾಮಿ ಯುವಕ ಸಂಘದ ವತಿಯಿಂದ ಗಣೇಶ ಪ್ರತಿಷ್ಠಾಪನೆ ಅಂಗವಾಗಿ ಶನಿವಾರ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.**

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಕರಬಸಯ್ಯ ಬಿನ್ನಾಳ ಮಾತನಾಡಿ, ಯಮನೂರು ಸ್ವಾಮಿ ಯುವಕ ಸಂಘದ ವತಿಯಿಂದ ಸತತ 29ನೇ ವರ್ಷದಿಂದ ಗಣೇಶನನ್ನು ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಪ್ರತಿವರ್ಷ ಗಣೇಶೋತ್ಸವದ ಅಂಗವಾಗಿ ಅನ್ನ ಸಂತರ್ಪಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ. ಸಂಘದ ಸಹಪಾಠಿ ಸ್ನೇಹಿತರು, ವಾರ್ಡಿನ ನಾಗರಿಕರು ಹಾಗೂ ಗ್ರಾಮಸ್ಥರು ನಿರಂತರವಾಗಿ ಸಹಕಾರ



ನೀಡುತ್ತಿದ್ದಾರೆ ಎಂದು ಹೇಳಿದರು.

ಸಂಘದ ವೀರೇಶ ಬಜೇಂತ್ರಿ ಮಾತನಾಡಿ, ಯಮನೂರು ಸ್ವಾಮಿ ಯುವಕ ಸಂಘದಲ್ಲಿ ಹಿಂದು-ಮುಸ್ಲಿಂ ಸಮಾಜದ ಸ್ನೇಹಿತರು ಯಾವುದೇ ಭೇದ-ಭಾವವಿಲ್ಲದೆ ಸಾಮರಸ್ಯದಿಂದ ಕಳೆದ 29 ವರ್ಷಗಳಿಂದ ಗಣೇಶ ಪ್ರತಿಷ್ಠಾಪನೆ, ಅನ್ನ ಸಂತರ್ಪಣೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಅದ್ದೂರಿಯಾಗಿ ಗಣೇಶೋತ್ಸವ ಆಚ-'ರಿಸುತ್ತಿದ್ದೇವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಘದ ಸೂರಪ್ಪ ಬಜೇಂತ್ರಿ, ಶರಣಪ್ಪ ಚಲವಾದಿ ಇಟಗಿ, ಬಸವರಾಜ ಸರಗಣಾಚಾರ,



ಮಂಜು ಯಶ್ ಬಜೇಂತ್ರಿ, ಮಂಜಿರ್ ಹುಸೇನ್ ಬೆದವಟ್ಟಿ, ಫಕೀರಪ್ಪ ಬಜೇಂತ್ರಿ, ಖಾಜಾಸಾಬ ಸಿದ್ನೇಕೊಪ್ಪ, ಅಂ-ದಪ್ಪ ಬಜೇಂತ್ರಿ, ರಹಿಮ್ ಮಟಮಾರಿ, ಸಿದ್ದಣ್ಣ ಮ್ಯಾದಾರ, ಚೇತನ್ ಕಲಾಲ್, ಪ್ರಕಾಶ ಬಂಡಿ, ಮಜಾನಸಾಬ ಬೆದವಟ್ಟಿ, ಫಕೀರ್ ಸಾಬ ನೆರೆಗಲ್, ಅಸ್ಲಾಂ ಬೆಣಕಲ್, ಸಂ-ಜಯ ಕಲಾಲ್, ವಿರೇಶ ಬಜೇಂತ್ರಿ ಸೇರಿದಂತೆ ಸಂಘದ ಪದಾಧಿಕಾರಿಗಳು, ಯುವಕರು ಹಾಗೂ ಹಿರಿಯರು ಉಪಸ್ಥಿತರಿದ್ದರು.

# 17.280 ಲೀಟರ್ ಮದ್ಯ ಹಾಗೂ ದ್ವಿ ಚಕ್ರ ವಾಹನವನ್ನು ಜಪ್ತು

ಅ.ಶ. ಸುದ್ದಿ ಇಂಡಿ

**ಇಂಡಿ: ತಾಲೂಕಿನ ತಾಂಬಾ ಗ್ರಾಮದಿಂದ ಅಂ-ದಾಜು 1 ಕಿ ಮೀ ದೂರದಲ್ಲಿ ಬಂಥನಾಳ ಗ್ರಾಮಕ್ಕೆ ಹೋಗುವ ರಸ್ತೆಯ ಮೇಲೆ ನೊಂದಣಿ ಸಂಖ್ಯೆ ಇಲ್ಲದ ಬಿಳಿ ಮತ್ತು ಕಪ್ಪು ಮಿಶ್ರಿತ ಬಣ್ಣದ ಬಜಾಜ ಕಂಪನಿಯ ಬಾಕ್ಸರ ದ್ವಿ ಚಕ್ರ ವಾಹನದ ಮೇಲೆ ಅಬಕಾರಿ ದಾಳಿ ಮಾಡಿ ಒಟ್ಟು-17.280 ಲೀಟರ್ ಮದ್ಯವನ್ನು ಹಾಗೂ ಒಂದು ದ್ವಿ ಚಕ್ರ ವಾಹನವನ್ನು ಜಪ್ತು ಪಡಿಸಿಕೊಂಡಿದ್ದು (ಜಪ್ತಿಪಡಿಸಿದ.**

ವಸ್ತುಗಳ ಅಂದಾಜು ಮೌಲ್ಯ-50080/-) ಆರೋಪಿತನಾದ ಅಬ್ದುಲಸತ್ತಾರ ಮಹಮ್ಮದಲಿ ಗೌರ



ವಯಾ-25 ಸಾ-ಮಸಳಿ ಬಿಕೆ ತಾ-ಇಂಡಿ ಸದರಿ ಆರೋಪಿತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು,ಎಸ್ ಜಿ ಅಂಗಡಿ ಅಬಕಾರಿ ಉಪ ನಿರೀಕ್ಷಕರು-2 ಇಂಡಿ ವಲಯ ರವರು ಪ್ರಕರಣವನ್ನು ದಾಖಲಿಸಿಕೊಂಡರು. ಸಿಬಂದ್ದಿಗಳಾದ, ಸವಿತಾ ಮುಧೋಳ, ಸಂಜೀವಕುಮಾರ ಹೂವಿನವರ, ಸುಭಾಸ ಅಥರ್ಗಾ, ಮಂಜುನಾಥ ಬಡಿಗೇರ, ಶಿವಶಂಕರ ಗೋಟ್ಯಾಳ ದಾಳಿಯಲ್ಲಿ ಪಾಲ್ಗೊಂಡಿದರು ಅಂತಾ ರಾಹುಲ್ ನಾಯಕ ಅಬಕಾರಿ ನಿರೀಕ್ಷಕರು ಇಂಡಿ ವಲಯ ರವರು ತಿಳಿಸಿರುತ್ತಾರೆ.

# ಐತಿಹಾಸಿಕ ಸ್ಮಾರಕಗಳ ಸ್ವಚ್ಛತೆಗೆ ಸ್ವಚ್ಛತಾ ಹೀ ಸೇವಾ ಆಂದೋಲನ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ವಿಜಯಪುರದ ಐತಿಹಾಸಿಕ ಪ್ರವಾಸಿ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುವುದರಿಂದ ಜಿಲ್ಲೆಯ ಆರ್ಥಿಕತೆಗೆ ಬಲ ಬರುವುದಲ್ಲದೇ, ಸ್ಥಳೀಯ-ರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಆರ್. ಹಿತೇಂದ್ರ ಹೇಳಿದರು.**

ವಿಶ್ವ ಪ್ರವಾಸೋದ್ಯಮ ದಿನಾಚರಣೆ-2026ರ ಅಂಗವಾಗಿ ಡಿಜಿಟಲ್ ಕಾರ್ಯಸೂಚಿ ಮತ್ತು ಕೃತಕ ಬುದ್ಧಿಮತ್ತೆ ಬಳಸಿ ಪ್ರವಾಸೋದ್ಯಮದ ಮರುಸೃಷ್ಟಿ ಎಂಬ ಧ್ಯೇಯಯವಾಕ್ಯದೊಂದಿಗೆ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಪುರಾತತ್ವ, ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಕೂಡಗಿ ಎನ್.ಟಿ.ಪಿ.ಸಿ ಕೂಡಗಿ, ಹೋಟೆಲ್ ಅಸೋಸಿಯೇಷನ್ ವಿಜಯಪುರ ಹಾಗೂ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯ ಶ್ರೀಮತಿ ಬಂಗಾರಮ್ಮ ಸಜ್ಜನ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಿಳಾ ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಗರದ ಐತಿಹಾಸಿಕ ಆನಂದ ಮಹಲ್ ಸ್ಮಾರಕದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸ್ವಚ್ಛತಾ ಹೀ ಸೇವಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಗರದಲ್ಲಿರುವ ಸ್ಮಾರಕಗಳಿಂದಾಗಿ ವಿಜಯಪುರ ವಿಶ್ವ ಪ್ರಸಿದ್ಧಿ ಪಡೆದಿದೆ.ಪ್ರವಾಸಿಗರನ್ನು ಆಕರ್ಷಿಸಿ, ಈ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳು ತೆರೆದುಕೊಳ್ಳಲಿವೆ ಎಂದರು.



ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಮಾತನಾಡಿ, ವಿಜಯಪುರ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಪ್ರವಾಸಿಗರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಮಾರಕಗಳ ಸಂರಕ್ಷಣೆ, ಸೌಂದರ್ಯೀಕರಣ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ವಿವಿಧ ಯೋಜನೆಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.ಸ್ವದೇಶ ದರ್ಶನ ಯೋಜನೆ-2.0ರಡಿ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಸ್ಮಾರಕ ದತ್ತು ಯೋಜನೆಯಡಿ ಐತಿಹಾಸಿಕ ತಾಜಬಾವಡಿ ಸ್ಮಾರಕವನ್ನು ಟಾಟಾ ಕನ್ಸಲ್ಟೆನ್ಸಿ ಫೌಂಡೇಷನ್ ಹಾಗೂ ವರ್ಲ್ಡ್ ಮಾನ್ಯುಮೆಂಟ್ ಫಂಡ್ಸ್ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದ ಅವರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದಲೂ ಜಿಲ್ಲೆಯ ವಿವಿಧ ಸ್ಮಾರಕಗಳ ಸಂರಕ್ಷಣಾ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಜಿಲ್ಲೆಯ ಪ್ರವಾಸಿ ತಾಣಗಳ ಸಮಗ್ರ ಮಾಹಿತಿಯನ್ನು ಒಳಗೊಂಡ ಆ?ಯಪ್ ಸಿದ್ಧಪಡಿಸಲಾಗಿದ್ದು, ಪ್ರವಾಸಿಗರಿಗೆ ಅಗತ್ಯ ಮಾಹಿತಿಯನ್ನು ಸುಲಭವಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಪ್ರವಾಸೋದ್ಯಮದ ಮಹತ್ವ ಹಾಗೂ ಐತಿಹಾಸಿಕ ಪರಂಪರೆಯ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಎನ್‌ಟಿಪಿಸಿ ಕೂಡಗಿ ಸಂಸ್ಥೆಯ ಸಂತೋಷ್ ತಿವಾರಿ ಮಾತನಾಡಿ, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಕಲಾ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುವ ಅಗತ್ಯವಿದೆ ಎಂದ ಅವರು, ಕಲಾವಿದರು ರಚಿಸಿದ ಕಲಾಕೃತಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಆನಂದ ಮಹಲ್ ಸ್ಮಾರಕದ ಆವರಣದಲ್ಲಿ ಸ್ವಚ್ಛತಾ ಹೀ ಸೇವಾ ಆಂದೋಲನದಡಿ ಸ್ಮಾರಕ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಕ್ಕೆ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರಾದ ಅರವಿಂದ ಹೂಗಾರ ಅವರು ಚಾಲನೆ ನೀಡಿದರು. ಜೊತೆಗೆ ಎನ್.ಟಿ.ಪಿ.ಸಿ ಕೂಡಗಿ ಮತ್ತು ಕ್ಯಾನವಾಸ್ ಆರ್ಟ್ ಫೌಂಡೇಶನ್ ಸಹಯೋಗದಲ್ಲಿ ಐತಿಹಾಸಿಕ ಇಬ್ರಾಹಿಂ ರೋಜಾ ಸ್ಮಾರಕದ ಆವರಣದಲ್ಲಿ ಹಿರಿಯ ಹಾಗೂ ಉದಯೋನ್ಮುಖ ಕಲಾವಿದರಿಗಾಗಿ ಆಕರ್ಷಕ ಚಿತ್ರಕಲಾ ಶಿಬಿರ ಆಯೋಜಿಸಲಾಗಿತ್ತು. ಜಿಲ್ಲಾಧಿಕಾ-ರಿಗಳಾದ ಡಾ. ಆನಂದ ಕೆ. ಅವರು ಸ್ವತಃ ಕಲಾಕೃತಿ ಬಿಡಿಸುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಎನ್‌ಟಿಪಿಸಿ ಕಾರ್ಪೊರೇಟ್ ಸಂಪರ್ಕಾಧಿಕಾರಿ ಪೂಜಾ ಪಾಂಡೆ, ಡಿಜಿಎಂ ಜಯದೀಪ ತುಶಾರ, ಎಎಸ್‌ಐ ಸಹಾಯಕ ಸಂರಕ್ಷಣಾಧಿಕಾರಿ ವಿಜಯಕುಮಾರ, ಎಚ್.ಆರ್. ಮುಖ್ಯಸ್ಥ ಎಸ್.ವಿ.ಡಿ. ರವಿಕುಮಾರ, ಹೋಟೆಲ್ ಅಸೋಸಿಯೇಷನ್ ಕಾರ್ಯದರ್ಶಿ ವಿಜಯಕುಮಾರ ದೋಣಿ, ಡಿ.ಪಿ. ಜಾಧವ್, ಪೀಟರ್ ಅಲೆಕ್ಸಾಂಡರ್, ಅಮೀನ ಹುಲ್ಲೂರ, ಬಿ.ಎಲ್.ಡಿ.ಇ ಸಂಸ್ಥೆಯ ಪ್ರೊ. ವೈ. ತಮ್ಮಣ್ಣ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸಹಾಯಕ ಸಂರಕ್ಷಣಾಧಿಕಾರಿ ಲಾರೆನ್ಸ್, ಮಹಾನಗರ ಪಾಲಿಕೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ, ಪ್ರವಾಸಿ ಮಾರ್ಗದರ್ಶಿಗಳು, ಇಲಾಖೆಯ ಅಧಿಕಾ-ರಿಗಳು, ಕಾಲೇಜಿನ ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರು ಅರವಿಂದ ಹೂಗಾರ ಸ್ವಾಗತಿಸಿದರು. ಕಲಾವಿದ ರಮೇಶ ಚವ್ಹಾಣ ನಿರೂಪಿಸಿದರು. ಚಿತ್ರಕಲಾ ಶಿಬಿರದಲ್ಲಿ ಕಲಾವಿದರಾದ ಪಿ.ಎಸ್. ಕಡೇಮನಿ, ವಿದ್ಯಾಧರ ಸಾಲಿ, ಬಿ.ಎಸ್. ಪಾಟೀಲ, ವಿ.ವಿ. ಹಿರೇಮಠ, ರಮೇಶ ಚವ್ಹಾಣ, ಶಿವಣ್ಣ ಗೊಳಸಂಗಿ, ಎ.ಎಸ್. ಕಾಖಂಡಕಿ, ಜಿ.ಎಸ್. ಭೂಸಗೊಂಡ, ಶಿವು ಹೂಗಾರ, ಸವಿತಾ ಮಾನೆ, ವಿಶ್ವನಾಥ್ ಹಂಡಿ, ಶಿವಾನಂದ ಅಥಣಿ, ಸಿದ್ದು ಬಳೂಲಗಿಡದ, ಮಲ್ಲಿಕಾರ್ಜುನ್ ಚಿಂಚೋಳಿ, ರಾಘವೇಂದ್ರ ಪಾಟೀಲ, ಕೃಷ್ಣ ಬಡಿಗೇರ, ಗಂಗಾಧರ ಮಾಯಾಚಾರಿ, ಅಮಿತ ಕಮ್ಮಾರ, ವಿಶ್ವನಾಥ್ ಎಚ್.ಎಂ., ಶ್ರೀಶೈಲ ಹೂಗಾರ, ಗಿರಿಜಾ ಬಿರಾದಾರ, ಆನಂದ್ ಹೂಗಾರ, ಅಶೋಕ ನೆಲ್ಲಗಿ, ಜಿ.ವಿ. ಹಂಪಣ್ಣವರ ಹಾಗೂ ವೈಷ್ಣವಿ ಚವ್ಹಾಣ ಸೇರಿದಂತೆ 25ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು.

## ಲೇಖಕರ ದಿನಚರಿ...

# ದಿವ್ಯತೆಯ ಅರಿತ ಸಂತನಿಗೆ ಸೂಕ್ತ ಗೌರವ



ಸ್ವಾಮೀಜಿಯವರಿಗೆ ನಾಡಹಬ್ಬ ದಸರಾ ಉದ್ಘಾಟನೆಯ ಗೌರವ)

ವಿನಯವೇ ಮೂರ್ತಿವೆತ್ತ ವ್ಯಕ್ತಿತ್ವ, ಭಕ್ತರ ನೋವಿಗೆ ಕಿವಿಯಾಗುವ,ಅವರ ಆಕ್ರಂದನಕ್ಕೆ ದನಿಯಾಗುವ ಭಾವುಕ ಸಂತ, ಮಕ್ಕಳೊಂದಿಗೆ ಮಗುವಿನಂತೆ ಆಡುವ ಮುಗ್ಧ ಜೀವಿ. ಕಿರಿ ವಯಸ್ಸಿನಲ್ಲೇ ಘನಪೀಠವನ್ನು ಏರಿ ಆ ಪೀಠದ ಘನತೆಯನ್ನು ಹಿರಿದೆತ್ತರಕ್ಕೆ ಕೊಂಡೊಯ್ದ ಆಧ್ಯಾತ್ಮದ ಸಿರಿ. ಆಬಾಲವೃದ್ಧರಾದಿಯಾಗಿ ಎಲ್ಲರನ್ನೂ ಪ್ರೀತಿಯ, ಭಾವನಾತ್ಮಕ ಕೊಂಡಿಯಲ್ಲಿ ಬೆಸೆವ ಮಾತೃ ಸ್ವರೂಪಿ.

ಭಾರತ ದೇಶದಾದ್ಯಂತ ತನ್ನೂರ ಮಠದ ಸಿರಿ ಪರಂಪರೆಯನ್ನು ದಾಸೋಹದ ಮೂಲಕ ತೋ-ರಿಸಿದ ಧೀಮಂತ ಸಂತ, ಘನ ಸಂತ ಮಹಾತ್ಮರಿಂದ ಹಿಡಿದು ರಾಜಕಾರಣಿಯವರೆಗೆ, ಉದ್ಯಮಿಗಳಿಂದ ಹಿಡಿದು ಸದ್ಗುರುವಿನಂತಹ ಆಧುನಿಕ ಗುರುಗಳವರೆಗೆ ಸಮಾಜದ ಎಲ್ಲ ಗಣ್ಯ ಮಾನ್ಯ ವ್ಯಕ್ತಿಗಳು ಇವರ ಪೀಠಾಧಿಪತ್ಯದ ಶ್ರೀ ಮಠದ ರಥೋತ್ಸವಕ್ಕೆ ಬಂದು ಭಕ್ತಿಯ ಶಕ್ತಿಯ ಕಂಡು ಧನ್ಯರಾದವರು.

ತಕ್ಷಣ ಭಾರತದ ಮಹಾಕುಂಭಮೇಳ ಎಂದು ಮನದುಂಬಿ ಹೇಳಲು ಕಾರಣವಾದವರು. ಅವರು ಮಾತನಾಡಿದರೆ ಮುತ್ತು ಚೆಲ್ಲಿದಂತೆ. ಸಾವಿರಾರು ಜನ-ರಿರುವ ಸಭಾಂಗಣ ಕೂಡ ಸ್ಥಬ್ದತೆಯ ನೆಲೆವೀಡಾಗುತ್ತದೆ. ಲಕ್ಷಾಂತರ ಜನರು ಕಲೆಯುವ ಜಾತ್ರೆ ಕೂಡ ಶಿಸ್ತಿನ, ಅಚ್ಚು ಕಟ್ಟಿನ ಬೀಡಾಗುತ್ತದೆ. ಅವರ ಮಾತುಗಳನ್ನು ಕೇಳಲೆಂದೇ ದೂರ ದೂರದಿಂದ ಜನರು ಆಗಮಿಸುತ್ತಾರೆ. ಅವರ ಮಾತುಗಳಲ್ಲಿ ಆಜ್ಞೆ ಇರುವುದಿಲ್ಲವಾದರೂ ಅವರ ಪ್ರತಿ ಮಾತು ಭಕ್ತರಿಗೆ ಆಣೆ



ಇಡೀ ಕೊಪ್ಪಳ ನಗರದಲ್ಲಿ ಮಾತ್ರವಲ್ಲದೇ ಜಿಲ್ಲೆಯಲ್ಲಿಯೇ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಸಾಮಾಜಿಕ ಸೇವೆಗೆ ಹೊಸದೊಂದು ಪರಿಭಾಷೆ ಬರೆದ ವ್ಯಕ್ತಿತ್ವ ಅವರದು.

ಅವರ ಛಾಪು ಜಿಲ್ಲೆ ಗಳ ಗಡಿ ಮೀ-ರಿದೆ.ಬರೀ ಪೂಜೆ ಜಪ-ತಪಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳದೆ ಮಠದ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಜನರ ಸಾಂಘಿಕ ಬಲವನ್ನಾಗಿಸಿ ಮುನ್ನಡೆಸಿದವರು ಅವರು. ಅವರ ಕರ್ತೃತ್ವ ಶಕ್ತಿ ಅಪಾರ.... ಇದರಲ್ಲಿ ಎಳ್ಳಷ್ಟು ಉತ್ಪ್ರೇಕ್ಷೆ ಇಲ್ಲ. ಮಠದ ಉಗ್ರಾಣದಲ್ಲಿ ಕೆಲಸಗಾರರ ಜೊತೆ ಮೂಟೆ ಹೊರಲು ಹಿಂದೇಟು ಹಾಕದ ಅವರು ಶ್ರಮದ ಬದುಕಿನ ಸಂಕೇತವಾಗಿ ತೋ-ರಿದರೆ, ಮಠದ ವಸತಿ ನಿಲಯದ ಮಕ್ಕಳಿಗೆ ಉಣ ಬಡಿಸುವಾಗ ಮಮತೆ ತುಂಬಿದ ಮಾತೃತ್ವದ ಪ್ರತೀಕವಾಗಿ ಕಾಣುತ್ತಾರೆ. ಜಾತ್ರೆಯ ಸಮಯದಲ್ಲಿ ತಯಾರಾಗುವ ದಾಸೋಹದ ಅಡುಗೆ ಮನೆಯಲ್ಲಿ ಎಲ್ಲ ಪಾರುಪತ್ಯಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವ ಅವರು ತೃಣದಿಂದ ಘನದವರೆಗೆ ಎಲ್ಲವನ್ನೂ ತಮ್ಮ ದೃಷ್ಟಿಗೆ ಗೋಚರವಾಗುವಂತೆ ಪಾರದರ್ಶಕತೆಯನ್ನು ಕಾಯ್ದುಕೊಂಡು ಬಂದ ಮಹಾನ್ ಶಕ್ತಿಯನ್ನು ಹೊಂದಿದವರು.

ಶ್ರೀಮಂತರ ಸೇವೆಯನ್ನು ಗುರುತಿಸುವುದರ ಜೊತೆಗೆ ದೀನ ದುರ್ಬಲ ಬಡವರ್ಗದವರ ಸೇವಾ ಭಾವವನ್ನು ಗುರುತಿಸಿ ಅವ-ರಿಗೆ ಸಾಮಾಜಿಕ ಮನ್ನಣೆ ದೊರಕಿಸಿ ಕೊಟ್ಟವರು. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಭಾವದಲ್ಲಿ ನಡೆದವರು. ತಮಗಿಂತ ಹಿರಿಯ ಸ್ವಾಮೀಜಿಗಳಿಗೆ ತಲೆಬಾಗುವ ಅವರು ತಮಗಿಂತ ಕಿರಿಯರನ್ನು ತಿದ್ದಿ ಮುನ್ನಡೆಸುವರು. ಸದಾ ಶ್ರೀ ಮಠದ ಏಳಿಗೆಗಾಗಿ ದುಡಿಯುತ್ತಲೇ ಇರುವವರು. ಸಮಾಜವೆಂಬ ಬಹುದೊಡ್ಡ ಸಂಸಾರದ ಭಾರವನ್ನು ಹೆಗಲ ಮೇಲೆ ಹೊತ್ತವರು, ಹೊತ್ತು ನಿಭಾಯಿಸುತ್ತಿರುವವರು. ಅವರೇ ನಮ್ಮ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಸಂಸ್ಥಾನ ಮಠದ 18ನೇ ಪೀಠಾಧಿಪತಿಗಳಾಗಿರುವ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾ ಸ್ವಾಮೀಜಿಗಳು.

ತಮ್ಮ ಪೂರ್ವಾಶ್ರಮದಲ್ಲಿ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಆಹೇರಿ ಗ್ರಾಮದವರಾದ ಇವರ ಮೂಲ ಹೆಸರು ಪರುತಯ್ಯ. 1977 ರ ಜೂನ್ ಒಂದರಂದು ಕಲಬುರ್ಗಿ ಜಿಲ್ಲೆಯ ಹಾಗರಗುಂಡಿಯಲ್ಲಿ ಜನಿಸಿದವರು.

ವಿದ್ಯಾಕಾಂಕ್ಷೆಯಿಂದ ಕೊಪ್ಪಳದ ಗವಿಮಠದಲ್ಲಿ ಆಶ್ರಯ ಪಡೆಯಲು ಬಂದ ಅವರು ತಮ್ಮ ಸಾತ್ವಿಕ ನಡೆ ಸೂಕ್ಷ್ಮ ತಿಳುವಳಿಕೆ ವೈಚಾರಿಕ ದೃಷ್ಟಿಕೋನಗಳಿಂದ 17ನೇ ಪೀಠಾಧಿಪತಿಗಳಾದ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳ ಕೃಪೆಗೆ ಒಳಗಾದವರು. ಪರುತ ದೇವರು ಎಂದು ಶಿವ ಶಾಂತವೀರ ಮಹಾ ಸ್ವಾಮೀಜಿಯವರ ಉತ್ತರಾಧಿಕಾರಿಯಾಗಿ ನಿಯಮಿಸಲ್ಪಟ್ಟವರು. ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಆರನೇ ರ್ಯಾಂಕ್ ಗಳಿಸುವ ಮೂಲಕ ಪದವೀಧರರಾದವರು. ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ನಂತರ ಇಂಗ್ಲಿಷ್ ತತ್ವಶಾಸ್ತ್ರ ಮತ್ತು ಸಂಸ್ಕೃತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಅನಾರೋಗ್ಯದಿಂದ ಶಿವಶಾಂತವೀರ ಮಹಾಶಿವಯೋಗಿಗಳು ಬಳಲುತ್ತಿದ್ದಾಗ ಅವರನ್ನು ಅಕ್ಷರಶಹ ಮಗುವಿನಂತೆ ಜೋಪಾನ ಮಾಡಿದ ಶ್ರೀಗಳು ಮುಂದೆ ಅವರು ಲಿಂಗೈಕ್ಯರಾದ ನಂತರ 2002 ಡಿಸೆಂಬರ್ 13ರಂದು ಶ್ರೀಮಠದ 18ನೇ ಪೀಠಾಧಿಪತಿಗಳಾಗಿ ಅಭಿನವ ಗವಿಸಿದ್ದೇಶ್ವರ ಮಹಾ ಸ್ವಾಮೀಜಿ ಎಂದು ನಿಯುಕ್ತರಾದವರು. ಶ್ರೀಮಠದ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಪರಂಪರೆಯ ಎಲ್ಲಾ ಕಾರ್ಯಕ್ರಮಗಳನ್ನು ತಮ್ಮ ಸಂಕಲ್ಪ ಶಕ್ತಿಯ ಬಲದಿಂದ ಮಹಿಳೆಯರು ಮಕ್ಕಳು ಹಾಗೂ ಶ್ರೀಮಠದ ಭಕ್ತರ ಸಹಾಯ ಮತ್ತು ಸಹಕಾರದೊಂದಿಗೆ ಮುನ್ನಡೆಸುತ್ತಿರುವರು.



ಶ್ರೀ ಗವಿಸಿದ್ದೇಶ್ವರ ವಿದ್ಯಾವರ್ಧಕ ಸಂಸ್ಥೆಯ ಶಾಲೆ ಕಾಲೇಜುಗಳ ಕಟ್ಟಡಗಳನ್ನು ಮರು ನಿರ್ಮಿಸಿ ಒಳ್ಳೆಯ ಕಲಿಕಾ ವಾತಾವರಣವನ್ನು ಸೃಷ್ಟಿಸಿದವರು. ಆಯುರ್ವೇದ ಮಹಾವಿದ್ಯಾಲಯಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದವರು. ಸರಿಸುಮಾರು 2 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ವಸತಿ

> ❝ **ಶ್ರೀಮಂತರ ಸೇವೆಯನ್ನು ಗುರುತಿಸುವುದರ ಜೊತೆಗೆ ದೀನ ದುರ್ಬಲ ಬಡವರ್ಗದವರ ಸೇವಾ ಭಾವವನ್ನು ಗುರುತಿಸಿ ಅವರಿಗೆ ಸಾಮಾಜಿಕ ಮನ್ನಣೆ ದೊರಕಿಸಿ ಕೊಟ್ಟವರು. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಭಾವದಲ್ಲಿ ನಡೆದವರು. ತಮಗಿಂತ ಹಿರಿಯ ಸ್ವಾಮೀಜಿಗಳಿಗೆ ತಲೆಬಾಗುವ ಅವರು ತಮಗಿಂತ ಕಿರಿಯರನ್ನು ತಿದ್ದಿ ಮುನ್ನಡೆಸುವರು. ಸದಾ ಶ್ರೀ ಮಠದ ಏಳಿಗೆಗಾಗಿ ದುಡಿಯುತ್ತಲೇ ಇರುವವರು. ಸಮಾಜವೆಂಬ ಬಹುದೊಡ್ಡ ಸಂಸಾರದ ಭಾರವನ್ನು ಹೆಗಲ ಮೇಲೆ ಹೊತ್ತವರು, ಹೊತ್ತು ನಿಭಾಯಿಸುತ್ತಿರುವವರು. ಅವರೇ ನಮ್ಮ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಸಂಸ್ಥಾನ ಮಠದ ೧೮ನೇ ಪೀಠಾಧಿಪತಿಗಳಾಗಿರುವ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾ ಸ್ವಾಮೀಜಿಗಳು. ತಮ್ಮ ಪೂರ್ವಾಶ್ರಮದಲ್ಲಿ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಆಹೇರಿ ಗ್ರಾಮದವರಾದ ಇವರ ಮೂಲ ಹೆಸರು ಪರುತಯ್ಯ. ೧೯೭೭ ರ ಜೂನ್ ಒಂದರಂದು ಕಲಬುರ್ಗಿ ಜಿಲ್ಲೆಯ ಹಾಗರಗುಂಡಿಯಲ್ಲಿ ಜನಿಸಿದವರು. ವಿದ್ಯಾಕಾಂಕ್ಷೆಯಿಂದ ಕೊಪ್ಪಳದ ಗವಿಮಠದಲ್ಲಿ ಆಶ್ರಯ ಪಡೆಯಲು ಬಂದ ಅವರು ತಮ್ಮ ಸಾತ್ವಿಕ ನಡೆ ಸೂಕ್ಷ್ಮ ತಿಳುವಳಿಕೆ ವೈಚಾರಿಕ ದೃಷ್ಟಿಕೋನಗಳಿಂದ ೧೭ನೇ ಪೀಠಾಧಿಪತಿಗಳಾದ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳ ಕೃಪೆಗೆ ಒಳಗಾದವರು. ಪರುತ ದೇವರು ಎಂದು ಶಿವ ಶಾಂತವೀರ ಮಹಾ ಸ್ವಾಮೀಜಿಯವರ ಉತ್ತರಾಧಿಕಾರಿಯಾಗಿ ನಿಯಮಿಸಲ್ಪಟ್ಟವರು. ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಆರನೇ ರ್ಯಾಂಕ್ ಗಳಿಸುವ ಮೂಲಕ ಪದವೀಧರರಾದವರು. ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು.**

ಮತ್ತು ಪ್ರಸಾದ ನಿಲಯವನ್ನು ಸ್ಥಾಪಿಸಿದ ಅವರು ಮುಂದಿನ ಕೆಲವೇ ವರ್ಷಗಳಲ್ಲಿ ಐದು ಸಾವಿರ ವಿದ್ಯಾರ್ಥಿಗಳ ವಸತಿ ನಿಲಯವನ್ನು ನಿರ್ಮಿಸುತ್ತಿರುವರು.

ಶಿಕ್ಷಣದಿಂದಲೇ ಸಾಮಾಜಿಕ ಬದಲಾವಣೆ ಸಾಧ್ಯ ಎಂಬ ನಿಟ್ಟಿನಲ್ಲಿ ಬಿ ಎಡ್, ಡಿ ಎಡ್ ಮತ್ತು ಬಿಬಿಎಂ ಕಾಲೇಜುಗಳನ್ನು ಸ್ಥಾಪಿಸಿದವರು.

ಸಿಬಿಎಸ್‌ಸಿ ಪಠ್ಯಕ್ರಮದ ವಸತಿ ಶಾಲೆಯನ್ನು ಸ್ಥಾಪಿಸುವುದರ ಜೊತೆಗೆ ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರ ಪದವಿ ಶಿಕ್ಷಣದವ-ರಿಗೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ ಸ್ವತಹ ತಾವೇ ಮುಂದಾಳತ್ವ ವಹಿಸಿ ಜಿಲ್ಲೆಯ ಅತಿ ದೊಡ್ಡ ಹಳ್ಳವಾದ ಹಿರೇಹಳ್ಳವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಹಿರೇಹಳ್ಳ ಪುನಶ್ಚೇತನ ಟ್ರಸ್ಟ್ ಸ್ಥಾಪಿಸಿ ಜಲ ದೀಕ್ಷ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ತಾವೇ ಖುದ್ದಾಗಿ ಅಲ್ಲಿರುವ ಸ್ವಯಂಸೇವಕರೊಂದಿಗೆ ಕಾರ್ಯನಿರ್ವಹಿಸಿ ಎಲ್ಲಾ ಬಗೆಯ ಕೊಳೆಯನ್ನು ತೆಗೆದುಹಾಕಿ ಹಳ್ಳವನ್ನು ಸ್ವಚ್ಛಗೊಳಿಸಿ ಜಲ ಋಷಿ ಎಂದು ಖ್ಯಾತರಾದವರು. ಈಗಾಗಲೇ ಅನ್ನ, ಅರಿವು, ದಾಸೋಹಗಳನ್ನು ಆರಂಭಿಸಿದ್ದ ಅವರು ಭೂಮಿ ತಾಯಿಯ ಒಡಲ ಬೇಗೆಯನ್ನು ತಣಿಸಲು ವೃಕ್ಷದಾಸೋಹವನ್ನು ಆರಂಭಿಸಿದವರು.

ಕರೋನ ಕಾಲದಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆಗೆ ಅನುಕೂಲ ಮಾಡಿಕೊಟ್ಟು ನೂರಾರು ಜನರ ಆರೋಗ್ಯ ಕಾಯ್ದವರು. ಎಲ್ಲರ ಹೊಟ್ಟೆ ನೆತ್ತಿ ನೋಡುವ ಪೂಜ್ಯರು ನಿಸ್ಪೃಹಜೀವಿಗಳು. ಮಾನವೀಯ ಮಿಡಿತಗಳಿಗೆ ತುಡಿಯುವವರು.

ಕೊಪ್ಪಳದ ರೈಲು ನಿಲ್ದಾಣಕ್ಕೆ ಅವರ ಹೆಸರನ್ನು ಇಡಬೇಕೆಂಬ ಭಕ್ತರ ಆಗ್ರಹವನ್ನು ಅತ್ಯಂತ ನಮ್ರವಾಗಿ ತಿರಸ್ಕರಿಸಿ ತಾವು ಶ್ರೀಮಠದ ವಿನಮ್ರ ಕೆಲಸಗಾರ ಎಂದು ಹೇಳಿಕೊಂಡವರು ಒತ್ತಾಯದಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆಯಬಾರದು ಎಂದು ಭಕ್ತ-ರಿಗೆ ನಯವಾಗಿ ತಿಳಿ ಹೇಳಿದವರು.

ನಾಡು ನುಡಿಯ ರಕ್ಷಣೆಗಾಗಿ ಕಂಕಣ ಬದ್ಧರಾದವರು.

ದೊಡ್ಡ ದೊಡ್ಡ ಕಾರ್ಖಾನೆಗಳು ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕಾಲಿಟ್ಟಾಗ ತಮ್ಮ ಸಂಘಟನಾತ್ಮಕ ಚತುರತೆಯಿಂದ ಜಿಲ್ಲಾಡಳಿತವನ್ನು ಹಿಮ್ಮೆಟ್ಟಿಸಿದವರು.... ಈಗಲೂ ಕೂಡ ದೊಡ್ಡ ದೊಡ್ಡ ಉದ್ದಿಮೆಗಳ ಸ್ಥಾಪನೆಯ ಹಿಂದಿನ ಹುನ್ನಾರದ ಸ್ಪಷ್ಟ ಅರಿವನ್ನು ಹೊಂದಿ ಅಧಿಕಾರ ವರ್ಗಕ್ಕೆ ಚುರುಕು ಮುಟ್ಟಿಸಿದವರು.

ಅವರೇನಾದರೂ ತಮ್ಮ ಭಕ್ತರಿಗೆ ಒಂದು ಸನ್ನೆ ಮಾಡಿದರೂ ಇಡೀ ಕೊಪ್ಪಳ ಬೆಂಕಿಯ ಕುಲುಮೆಯಾಗುತ್ತಿತ್ತು, ಆದರೆ ದುಡಿಮೆಯನ್ನು ಬಿಟ್ಟು ಹೋರಾಟವನ್ನು ಮಾಡುವುದು ಬೇಡ ಎಂಬ ಶ್ರೀಗಳ ಮಾತಿಗೆ ಕಟ್ಟು ಬಿದ್ದ ಭಕ್ತರು ಲಕ್ಷಾಂತರ ಸಂಖ್ಯೆಯಲ್ಲಿ ಕಲೆತಿದ್ದರೂ ಕೂಡ ಕೂದಲು ಕೊಂಕದ ರೀತಿಯಲ್ಲಿ ಮನೆಗೆ ಮರಳಿದವರು.

ಇದುವರೆಗೂ ಸಂವಿಧಾನದ ನೀತಿ ನಿಯಮಗಳನ್ನು ಉಲ್ಲಂಘಿಸುವುದು ಬೇಡ...

ಹೋರಾಟ ಜಾರಿಯಲ್ಲಿರಲಿ ಆದರೆ ಅದಕ್ಕಾಗಿ ನಮ್ಮ ವೈಯಕ್ತಿಕ ಬದುಕನ್ನು ಹಾಳು ಮಾಡಿಕೊಳ್ಳುವುದು ಬೇಡ ಎಂದು ಹೋರಾಟಗಾರರಿಗೆ ತಿಳಿಹೇಳಿದವರು.

ವಿಶ್ವ ವಿದ್ಯಾಲಯಗಳು ಕೊಡ ಮಾಡುವ ಗೌರವ ಡಾಕ್ಟರೇಟ್ ಪುರಸ್ಕಾರವನ್ನು ನಾನಿನ್ನೂ ಆ ಮಟ್ಟದ ಸಾಧನೆಯ ಕೆಲಸ ಮಾಡಿಲ್ಲ ಎಂದು ಸವಿನಯದಿಂದಲೇ ತಿರಸ್ಕರಿಸಿದವರು.

ಇಷ್ಟೆಲ್ಲ ಹಿರಿಮೆಗಳನ್ನು ಹೊಂದಿದ್ದರೂ ಕೂಡ ಸಾಮಾನ್ಯರಲ್ಲಿ ಸಾಮಾನ್ಯರಾಗಿ ವರ್ತಿಸುವ ಅಸಾಮಾನ್ಯ ಸ್ವಾಮೀಜಿ ನಮ್ಮ ಅಭಿನವ ಗವಿಸಿದ್ದೇಶ್ವರ ಮಹಾ ಸ್ವಾಮೀಜಿಯವರು.

ಸಾರ್ವಜನಿಕರ ಹೋರಾಟದ ಸಮಯದಲ್ಲಿ ಅತ್ಯಂತ ಪ್ರಬುದ್ಧತೆಯಿಂದ ಒತ್ತಡಗಳನ್ನು ನಿರ್ವಹಿಸಿ ಸಮಾಜದಲ್ಲಿ ದೇಶಕ್ಕಿಂತ, ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂದು ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿದವರು.

ಇಂತಹ ನಮ್ಮ ಪ್ರೀತಿಗೆ,, ಭಕ್ತಿಪೂರ್ವಕ ಗೌರವಕ್ಕೆ ಪಾತ್ರರಾದ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾ ಸ್ವಾಮೀಜಿಯವರಿಗೆ ನಮ್ಮ ಕನ್ನಡ ನಾಡಿನ ಹೆಮ್ಮೆಯ ನಾಡ ಹಬ್ಬ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಯ ಗೌರವವನ್ನು ನೀಡುವ ಮೂಲಕ ಕರ್ನಾಟಕ ಘನ ಸರ್ಕಾರವು ತನ್ನ ಗೌರವವನ್ನು ಹೆಚ್ಚಿಸಿಕೊಂಡಿದೆ ಎಂದರೆ ತಪ್ಪಿಲ್ಲ. ಈ ನಿರ್ಧಾರವನ್ನು ಕೈಗೊಂಡ ಘನ ಸರ್ಕಾರದ ಮುಖ್ಯಮಂತ್ರಿಯಾದಿಯಾಗಿ ಸರ್ವ ಸದಸ್ಯರಿಗೂ ತುಂಬು ಹೃದಯದ ಧನ್ಯವಾದಗಳು. ನಮ್ಮೆಲ್ಲರ ನೆಚ್ಚಿನ ದೈವ, ಪ್ರೀತಿಯ ಗುರುಗಳಾದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಶಿವಯೋಗಿಗಳು ಐತಿಹಾಸಿಕ ಸಂಭ್ರಮದ ನಾಡ ಹಬ್ಬ ದಸರಾ ಮಹೋತ್ಸವದ ಉದ್ಘಾಟನೆಯ ಗಳಿಗೆಗಾಗಿ ಕಾಯುತ್ತಿರುವ ಭಕ್ತರ ಪರವಾಗಿ ಶ್ರೀಗಳಿಗೆ ಅನಂತಾನಂತ ಭಕ್ತಿ ಪೂರ್ವಕ ನಮನಗಳು



# ಬರ ಪರಿಹಾರ 2,500 ನೀಡಿದ್ದು ರೈತರ ಮೂಗಿಗೆ ತುಪ್ಪ ಒರೆಸಿದಂತೆ: ರೈತ ಸಂಘ ಆಕ್ರೋಶ

ಅ.ಶ. ಸುದ್ದಿ ಶಹಾಪುರ

**ಶಹಾಪುರ: ಯಾದಗಿರಿ ಜಿಲ್ಲೆಯಾದ್ಯಂತ ಈ ಬಾರಿ ಮಳೆಯಿಲ್ಲದೆ ಬೆಳೆ ಸಂಪೂರ್ಣ ನಾಶವಾಗಿದ್ದು, ಬೆಳೆ ಇಲ್ಲದೆ ಬೆಳೆಗಳ ಫಲ ಸಿಗದೇ ರೈತರು ಸಂಪೂರ್ಣ ಕಂಗಾಲಾಗಿದ್ದಾರೆ. ಸಾಲ-ಸೋಲ ಮಾಡಿ ಬೆಳೆದ ಬೆಳೆಗಳೆಲ್ಲವೂ ಕಣ್ಣೆದುರೇ ಒಣಗಿ ಹೋಗಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿ ರೈತ ಕುಟುಂಬಗಳು ತೀವ್ರ ಆತಂಕ ಹಾಗೂ ಸಂಕಷ್ಟಕ್ಕೆ ಸಿಲುಕಿವೆ. ಇಂತಹ ಭೀಕರ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ರೈತರಿಗೆ ಘೋಷಿಸಿರುವ ಕೇವಲ 2,500 ಪರಿಹಾರವು ಮೂಗಿಗೆ ತುಪ್ಪ ಒರೆಸುವ ಕೆಲಸವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ವಾಸುದೇವ ಮೇಟಿ ಬಣ) ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.**

ಶಹಾಪುರ ನಗರದ ಪ್ರವಾಸಿ ಮಂದಿರದಲ್ಲಿ ರೈತರು ಮಹತ್ವದ ಸಭೆ ನಡೆಸಿ, ರಾಜ್ಯಾಧ್ಯಕ್ಷ ವಾಸುದೇವ ಮೇಟಿ ಹಾಗೂ



ಯಾದಗಿರಿ ಜಿಲ್ಲಾಧ್ಯಕ್ಷ ಹಣಮಂತ್ರಾಯ ಪರಸನಳ್ಳಿ ಅವರ ಜಂಟಿ ನೇತೃತ್ವದಲ್ಲಿ ರೈತರೊಂದಿಗೆ ಸಭೆ ನಡೆಸಿ ಸರ್ಕಾರಕ್ಕೆ ಸ್ಪಷ್ಟ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡರು ಸರ್ಕಾರಕ್ಕೆ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟರು:

**ರೈತರಲ್ಲಿ ವಿನಂತಿ – ತಾಳ್ಮೆ ಕಳೆದುಕೊಳ್ಳಬೇಡಿ:** "ಜಿಲ್ಲೆಯಾದ್ಯಂತ ಭೀಕರ ಬರದ ಪರಿಸ್ಥಿತಿ ಇದ್ದು, ಮಳೆಯಾಗದೆ ಬೆಳೆಗಳಿಲ್ಲದೆ ರೈತರು ಕಂಗಾಲಾಗಿದ್ದಾರೆ. ಆದಾಗ್ಯೂ ಯಾವುದೇ ರೈತರು ಧೈರ್ಯಗೆಟ್ಟು ತಾಳ್ಮೆ ಕಳೆದುಕೊಳ್ಳಬಾರದು, ಅನಾಹುತದ ಹಾದಿ ಹಿಡಿಯಬಾರದು. ರೈತರ ಈ ಸ್ಥಿತಿಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು ನ್ಯಾಯ ಕೊಡಿಸುವ ಜವಾಬ್ದಾರಿಯನ್ನು ರೈತ ಸಂಘ ವಹಿಸಿಕೊಳ್ಳಲಿದೆ" ಎಂದು ನಾಯಕರು ಭರವಸೆ ನೀಡಿದರು.

**2,500 ಪರಿಹಾರ ಕೇವಲ ಗಿಮಿಕ್:** ಸರ್ಕಾರ ಘೋಷಿಸಿರುವ ಕೇವಲ ?2,500 ಸಾಂಕೇತಿಕ ಸಹಾಯದಿಂದ ರೈತರ ಗೊಬ್ಬರ ಹಾಗೂ ಬಿತ್ತನೆ ಬೀಜದ ವೆಚ್ಚವೂ ಬರುವುದಿಲ್ಲ. ಇದು ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸದೆ ಮಾಡಿದ ಕಣ್ಣೊರೆಸುವ ತಂತ್ರವಾಗಿದೆ.

**ಪ್ರತಿ ಎಕರೆಗೆ 50,000 ನೀಡಿ:** ಎಕರೆಗೆ ಹತ್ತಾರು ಸಾವಿರ ರೂಪಾಯಿ ಹೂಡಿಕೆ ಮಾಡಿ ನಷ್ಟ ಅನುಭವಿಸಿ ಕಂಗಾಲಾಗಿರುವ ರೈತರನ್ನು ರಕ್ಷಿಸಲು ಸರ್ಕಾರ ತಕ್ಷಣವೇ ವಿಳಂಬ ಮಾಡದೇ ಪ್ರತಿ ಎಕರೆಗೆ ?50,000 ನಷ್ಟಪರಿಹಾರವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು.

**ಉಗ್ರ ಹೋರಾಟದ ಎಚ್ಚರಿಕೆ:** ಸರ್ಕಾರ ರೈತರ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲಾದ್ಯಂತ ಉಗ್ರ ಹೋರಾಟಕ್ಕಿಳಿಯುವುದು ಅನಿವಾರ್ಯ.

ಒಂದೊಮ್ಮೆ ಅನಾಹುತಗಳು ಸಂಭವಿಸಿದರೆ ಅಥವಾ ಹೋರಾಟದಿಂದ ಆಗುವ ಅಹಿತಕರ ಘಟನೆಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೇ ನೇರ ಹೊಣೆಯಾಗಲಿವೆ ಎಂದು ಎಚ್ಚರಿಸಿದರು. ಈ ಮಹತ್ವದ ಸಭೆಯಲ್ಲಿ ರೈತ ಮುಖಂಡರಾದ ದೇವಿಂದ್ರಪ್ಪ ಕೋಲ್ಕರ್, ವೆಂಕೋಬ ಕಟ್ಟಿಮನಿ, ಶಹಾಪುರ ತಾಲೂಕು ಅಧ್ಯಕ್ಷ ಧರ್ಮಣ್ಣ ತಹಶೀಲ್ದಾರ್, ಮಲ್ಲಿಕಾರ್ಜುನ್ ಕಟ್ಟಿಮನಿ, ಧರ್ಮರೆಡ್ಡಿ ಎಚ್. ತಳವಾರ್, ಹೈಯ್ಯಳಪ್ಪ ಆಂದೋಲ, ಎಂ.ಡಿ. ರಫಿಕ್, ಶಿವು ದಿಗ್ಗಿ, ಬಾಬು ಸಾಬ್ ಇನಾಮದಾರ, ಬಸವರಾಜ ಗಾಂಜಿ, ಶಂಕರ ಕಟ್ಟಿಮನಿ, ರಾಘು ಶಾಖಾಪುರ, ಪ್ರವೀಣ್ ಕುಮಾರ್, ಚಂದ್ರಶೇಖರ ದಿಗ್ಗಿ ಸೇರಿದಂತೆ ನೂರಾರು ರೈತರು ಹಾಗೂ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕಬ್ಬಿಗೆ 5,500 ದರಕ್ಕೆ ಪಟ್ಟು: ಸೆ.29ರಂದು ಜೋಶಿ ಮನೆ ರೈತ ಸಂಘದ ಮುತ್ತಿಗೆ: ಶಾಂತಗೌಡ ಪಾಟೀಲ ನಡಹಳ್ಳಿ

ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಕಬ್ಬು ಬೆಳೆಗಾರರಿಗೆ ಆಗುತ್ತಿರುವ ನಿರಂತರ ಅನ್ಯಾಯ, ಸಕ್ಕರೆ ಕಾರ್ಖಾನೆಗಳ ಲೂಟಿ ಹಾಗೂ ಕೇಂದ್ರ ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿ ಸೆಪ್ಟೆಂಬರ್ 29ರಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಹುಬ್ಬಳ್ಳಿಯ ನಿವಾಸಕ್ಕೆ ಸುಮಾರು ಒಂದು ಲಕ್ಷಕ್ಕೂ ಅಧಿಕ ರೈತರೊಂದಿಗೆ ಮುತ್ತಿಗೆ ಹಾಕಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಶಾಂತಗೌಡ ಪಾಟೀಲ ನಡಹಳ್ಳಿ ಗುಡುಗಿದ್ದಾರೆ.**



ಮುದ್ದೇಬಿಹಾಳದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಕ್ಕರೆ ಕಾರ್ಖಾನೆಗಳು ಮತ್ತು ಆಡಳಿತ ವ್ಯವಸ್ಥೆಯು ರೈತರ ಬೆವರಿನ ಫಲವನ್ನು ಲೂಟಿ ಮಾಡುತ್ತಿರುವ ಕುರಿತು ಅಂಕಿ-ಅಂಶಗಳ ಸಮೇತ ಗಂಭೀರ ಆರೋಪಗಳನ್ನು ಶಾಂತಗೌಡ ಪಾಟೀಲ ನಡಹಳ್ಳಿ ಮಾಡಿದರು. ಕೇಂದ್ರ ಸಚಿವರ ಮನೆ ಮುತ್ತಿಗೆಗೆ ಕರೆ: ಕಳೆದ ಹಲವಾರು ತಿಂಗಳುಗಳಿಂದ ರೈತ ಸಂಘವು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಸತತ ಮನವಿ ಸಲ್ಲಿಸುತ್ತಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ರೈತರ ಸಂಕಷ್ಟಕ್ಕೆ ಸ್ಪಂದಿಸದ ಕಾರಣ ಸೆಪ್ಟೆಂಬರ್ 29ರಂದು ಅವರ ಹುಬ್ಬಳ್ಳಿ ನಿವಾಸಕ್ಕೆ ಮುತ್ತಿಗೆ ಹಾಕಿ ಉಗ್ರ ಹೋರಾಟ ನಡೆಸಲಾಗುವುದು. ಸಕ್ಕರೆ ಕನಿಷ್ಠ ಮಾರಾಟ ದರ (ಎಂ.ಎಸ್.ಪಿ) 60ಕ್ಕೆ ಏರಿಕೆಯಾಗಲಿ: ಕಳೆದ ಒಂಬತ್ತು ವರ್ಷಗಳಿಂದ ಸಕ್ಕರೆಯ ಎಂಎಸ್‌ಪಿ ದರ ಹೆಚ್ಚಳವಾಗಿಲ್ಲ. 2019ರಲ್ಲಿ ನಿಗದಿಪಡಿಸಿದಂತೆ ಪ್ರತಿ ಕೆಜಿಗೆ ಕೇವಲ ?31 ಇದೆ. ಆದರೆ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ?70ರವರೆಗೂ ತಲುಪಿದೆ. ಎಂಎಸ್‌ಪಿಯನ್ನು ?60ಕ್ಕೆ ನಿಗದಿಪಡಿಸಿದರೆ ಕಾರ್ಖಾನೆಯ ಗೇಟ್ ಮಾರಾಟ ದರ ಪ್ರತಿ ಕ್ವಿಂಟಾಲ್‌ಗೆ ?6,000 ಆಗಲಿದ್ದು, ರೈತರಿಗೆ ಯೋಗ್ಯ ದರ ನೀಡಲು ಸಾಧ್ಯವಾಗುತ್ತದೆ. ಪ್ರತಿ ಟನ್ ಕಬ್ಬಿಗೆ ?5,500 ದರ ನಿಗದಿಗೆ ಪಟ್ಟು: ರಸಗೊಬ್ಬರ ದರ ದುಪ್ಪಟ್ಟಾಗಿದೆ, ಆಳು-ಕಾಳು ಹಾಗೂ ಕಟಾವಿನ ವೆಚ್ಚಗಳು ಗಗನಕ್ಕೇರಿವೆ. ಕೇಂದ್ರ ಸರ್ಕಾರ ಘೋಷಿಸುವ ಎಫ್‌ಆರ್‌ಪಿ ದರದಿಂದ ರೈತರಿಗೆ ನಯಾಪೈಸೆ ಲಾಭವಿಲ್ಲ, ಅದು ಕಾರ್ಖಾನೆಗಳ ಹಿತವನ್ನಷ್ಟೇ ಕಾಯುತ್ತಿದೆ. ಹೀಗಾಗಿ 2026?27ನೇ ಸಾಲಿನ ಹಂಗಾಮಿಗೆ ಪ್ರತಿ ಟನ್ ಕಬ್ಬಿಗೆ ಕನಿಷ್ಠ ?5,500 ಬೆಲೆ ನಿಗದಿಪಡಿಸಲೇಬೇಕು. ಉಪ ಉತ್ಪನ್ನಗಳ ಆದಾಯದಲ್ಲಿ ಶೇ. 25ರಷ್ಟು ರೈತರಿಗೆ ಸಿಗಲಿ: ಕಾರ್ಖಾನೆಗಳ ಆಡಿಟ್ ವರದಿಗಳ ಪ್ರಕಾರವೇ ಕಬ್ಬಿನ ಉಪ ಉತ್ಪನ್ನಗಳಾದ ಮೊಲಾಸಿಸ್, ಬಗ್ಯಾಸ್ ಹಾಗೂ ಪ್ರೆಸ್‌ಮಡ್‌ಗಳಿಂದ ಪ್ರತಿ ಟನ್‌ಗೆ ?7,500 ರಿಂದ ?8,000 ಆದಾಯ ಬರುತ್ತಿದೆ. ನಿಯಮಾವಳಿ ಪ್ರಕಾರ ಶೇ. 75ರ ಅನುಪಾತದಲ್ಲಿ ರೈತರಿಗೆ ಆದಾಯ ಹಂಚಿಕೆಯಾಗಬೇಕು. ಉಪ ಉತ್ಪನ್ನಗಳಿಂದ ಬರುವ ಆದಾಯದ ಶೇ. 25ರಷ್ಟು ಪಾಲನ್ನು ನೀಡಿದರೂ ರೈತರಿಗೆ ಪ್ರತಿ ಟನ್‌ಗೆ 6,000 ಸಿಗಬೇಕಾಗುತ್ತದೆ. ಆದರೆ ಕಾರ್ಖಾನೆಗಳು ಕೇವಲ 3,300 ರಿಂದ ?3,500 ನೀಡಿ ವಂಚಿಸುತ್ತಿವೆ. ಕೋ-ಆಪರೇಟಿವ್ ಬ್ಯಾಂಕ್‌ಗಳ ಮೂಲಕ ಅಕ್ರಮ ದಂಧೆ ಮತ್ತು ಸಿಬಿಲ್ ವಂಚನೆ: ಕರ್ನಾಟಕ ಕಾಯ್ದೆಯ ಸೆಕ್ಷನ್ 9(1)(ಬಿ) ಪ್ರಕಾರ ಕಾರ್ಖಾನೆಗಳು ಪಾವತಿ ಮೊತ್ತವನ್ನು ನೇರವಾಗಿ ರೈತರ ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು. ಆದರೆ ಬಾಲಾಜಿ ಸಕ್ಕರೆ ಕಾರ್ಖಾನೆ ಸೇರಿದಂತೆ ಹಲವರು ತಮ್ಮದೇ 'ಸುಂದರ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್'ಗಳಲ್ಲಿ ರೈತರ ಖಾತೆ ತೆರೆದು, ಹಣವನ್ನು ತಿಂಗಳುಗಟ್ಟಲೆ ದುಡಿಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ, ಅನಕ್ಷರಸ್ಥ ರೈತರ ಹೆಸರಿನಲ್ಲಿ ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಎತ್ತಿ ವಂಚಿಸುತ್ತಿದ್ದು, ಸಾಲ ತೀರದೆ ರೈತರಿಗೆ ನೋಟಿಸ್ ಬರುತ್ತಿವೆ ಮತ್ತು ಅವರ ಸಿಬಿಲ್ ಸ್ಕೋರ್ ಹಾಳಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಸಿಗದಂತಾಗಿದೆ. ರಿಕವರಿಯಲ್ಲಿ ಭಾರೀ ಗೋಲ್‌ಮಾಲ್: ಕೃಷ್ಣಾ ನದಿ ಕಣಿವೆಯ ಕಬ್ಬಿನಲ್ಲಿ ಕನಿಷ್ಠ ಶೇ. 12 ರಿಂದ 13ರಷ್ಟು ರಿಕವರಿ ಬರುತ್ತದೆ. ಆದರೆ ಕಾರ್ಖಾನೆಗಳು ಶೇ. 10.89 ರಷ್ಟು ಕಡಿಮೆ ರಿಕವರಿ ತೋರಿಸಿ ಮೋಸ ಮಾಡುತ್ತಿವೆ. ಕಾರ್ಖಾನೆಗಳ ಸಿಬ್ಬಂದಿಯೇ ಲ್ಯಾಬ್‌ನಲ್ಲಿ ಕುಳಿತು ರಿಕವರಿ ನಿರ್ಧರಿಸುವ ಪದ್ಧತಿ ನಿಲ್ಲಬೇಕು; ಸರ್ಕಾರಿ ಅಧಿಕಾರಿಗಳು ಹಾಗೂ ರೈತ ಮುಖಂಡರನ್ನು ಒಳಗೊಂಡ

# ತಾಲೂಕು ಮಟ್ಟದ ಅಥ್ಲೆಟಿಕ್ಸ್‌ನಲ್ಲಿ ಶಾರದಾ ವಿದ್ಯಾನಿಕೇತನ ಪಿಯು ಕಾಲೇಜು ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆ

ಅ.ಶ. ಸುದ್ದಿ ಮಾನ್ವಿ

**ಮಾನ್ವಿ: ಲೋಯೋಲಾ ಕಾಲೇಜಿನ ಮೈದಾನದಲ್ಲಿ ನಡೆದ ತಾಲೂಕ ಮಟ್ಟದ ಪದವಿ ಪೂರ್ವ ಕಾಲೇಜುಗಳ ಬಾಲಕರ ವಿಭಾಗದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಶಾರದಾ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ ಹಲವು ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದು ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.**

800 ಮೀಟರ್ ಓಟದಲ್ಲಿ ವಿದ್ಯಾರ್ಥಿ ಚನ್ನಬಸವ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾನೆ. 3000 ಮೀಟರ್ ಹಾಗೂ 5000 ಮೀಟರ್ ಓಟಗಳಲ್ಲಿ ದೇವರಾಜ ದ್ವಿತೀಯ ಸ್ಥಾನ ಗಳಿಸಿ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ



ಆಯ್ಕೆಯಾಗಿದ್ದಾನೆ. ಇದೇ ವೇಳೆ 200 ಹಾಗೂ 400 ಮೀಟರ್ ರಿಲೇ ಸ್ಪರ್ಧೆಯಲ್ಲಿ ವಿಜಯ ಮತ್ತು ತಂಡದ ಸದಸ್ಯರು ದ್ವಿತೀಯ ಸ್ಥಾನ ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಮಾನ್ವಿ ತಾಲೂಕಿನ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಬಾಲಕಿಯರ ವಿಭಾಗದ ಅಥ್ಲೆಟಿಕ್ಸ್ ಕ್ರೀಡಾಕೂಟಗಳಲ್ಲಿ ನಮ್ಮ ಶಾರದಾ ವಿದ್ಯಾನಿಕೇತನ ಪಿ ಯು ಕಾಲೇಜಿನ ವಿದ್ಯಾರ್ಥಿನಿಯರು 3000 ಮೀಟರ್ ನಡಿಗೆ ಆಟದಲ್ಲಿ ಕು. ಮಾನಸ ಪ್ರಥಮ ಸ್ಥಾನ ಪಡೆದು ಜಿಲ್ಲೆಗೆ ಆಯ್ಕೆಯಾಗಿದ್ದಾಳೆ ಅದೇ ರೀತಿಯಾಗಿ 3000 ಮೀಟರ್ ಓಟದಲ್ಲಿ ಕು. ಸವಿತಾ ದ್ವಿತೀಯ ಸ್ಥಾನ 200 ಹಾಗೂ 400 ಮೀಟರ್ ರಿಲೆ ಆಟದಲ್ಲಿ ಅಶ್ವಿನಿ ಮತ್ತು ಸಂಗಡಿಗರು ದ್ವಿತೀಯ ಸ್ಥಾನ ಉದ್ದ ಜಿಗಿತ ಹಾಗೂ ಎತ್ತರ ಜಿಗಿತದಲ್ಲಿ ಕುಮಾರಿ ಸೌಭಾಗ್ಯ ಲಕ್ಷ್ಮಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಆಯ್ಕೆಯಾದ ವಿದ್ಯಾರ್ಥಿಗಳ ಈ ಸಾಧನೆಗೆ ಶಾರದಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಹೈಂದವಿ ಮಧುಸೂದನ್ ಗುಪ್ತಾಜೀ, ಕಾಲೇಜಿನ ಪ್ರಾಚಾರ್ಯ ವೀರಭದ್ರಯ್ಯ ಹಿರೇಮಠ ಹಾಗೂ ಕಾಲೇಜಿನ ಎಲ್ಲಾ ಉಪನ್ಯಾಸಕರು ಅಭಿನಂದನೆ ಸಲ್ಲಿಸಿ, ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲೂ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದರು.

# 21ನೇ ವರ್ಷದ ಸನಾತನ ಸಾಮ್ರಾಟ್ ಗಣೇಶೋತ್ಸವ: ವಿಜೃಂಭಣೆಯಿಂದ ಹೋಳಿಗೆ ಊಟ



ಅ.ಶ. ಸುದ್ದಿ ಕನಕಗಿರಿ

ಕನಕಗಿರಿ: ಪಟ್ಟಣದ 17ನೇ ವಾರ್ಡಿನ ಶ್ರೀ ಗೋಲಿಗೆರಪ್ಪ ಕಾಲೋನಿಯಲ್ಲಿ 21ನೇ



**ವರ್ಷದ ಸನಾತನ ಸಾಮ್ರಾಟ್ ಗಣೇಶನ ಪ್ರತಿಷ್ಠಾಪನೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ಹಮ್ಮಿಕೊಳ್ಳಲಾಗಿತ್ತು.**

ಗಣೇಶೋತ್ಸವದ ಅಂಗವಾಗಿ ಶನಿವಾರ ಗಣೇಶ ಕಮಿಟಿ ಹಾಗೂ ಓಣಿಯ ನಿವಾಸಿಗಳ ಸಹಯೋಗದಲ್ಲಿ ವಿಶೇಷವಾಗಿ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಕಾಲೋನಿಯ ನಿವಾಸಿಗಳು, ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಹೋಳಿಗೆ ಊಟವನ್ನು ಸ್ವೀಕರಿಸಿದರು. ಪ್ರತಿ ವರ್ಷವೂ ಗಣೇಶೋತ್ಸವವನ್ನು ಸಡಗರ ಹಾಗೂ ಭಕ್ತಿಭಾವದಿಂದ ಆಚರಿಸುತ್ತಿರುವ ಶ್ರೀ ಗೋಲಿಗೆರಪ್ಪ ಕಾಲೋನಿಯ ಗಣೇಶ ಕಮಿಟಿ ಹಾಗೂ ನಿವಾಸಿಗಳ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಸವರಾಜ್ ಯಾದವ್, ಅಂಬರೀಶ್, ಯಮನೂರಿ, ಮಹೇಶ್, ಮಲ್ಲೇಶ್, ಹನುಮೇಶ್, ರಾಜೇಶ್, ಯಲ್ಲಪ್ಪ,ಸುಧಾಕರ್ ಸಿಂಗಾಪುರ್, ಬಸವ ಸಿಂಗಾಪುರ್, ನಾಗರಾಜ್, ಗೊಲ್ಲಪ್ಪ ಚೇಟಿಗಿ, ಇನ್ನು ಅನೇಕರು ಉಪಸ್ಥಿತರಿದ್ದರು.

# ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಗ್ರಾಮದಲ್ಲಿ ತಾಲ್ಲೂಕು ಮಟ್ಟದ ಪ್ರಜಾ ಸೇವಾ ಆಂದೋಲನ ಸಭೆ

## ಸಿಇಒ ಡಾ. ವಾಸಂತಿ ಅಮರ್ ಅವರಿಂದ ಸಾರ್ವಜನಿಕರ ಅಹವಾಲು ಸ್ವೀಕಾರ

ಅ.ಶ. ಸುದ್ದಿ ಬೆಂ.ಗ್ರಾ

**ಬೆಂ. ಗ್ರಾ ಜಿಲ್ಲೆ: ದೊಡ್ಡಬಳ್ಳಾಪುರ ತಾಲೂಕಿನ ದೊಡ್ಡಬೆಳವಂಗಲ ಹೋಬಳಿಯ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಾಸಂತಿ ಅಮರ್ ಅವರು ಸಾರ್ವಜನಿಕರ ಅಹವಾಲು ಆಲಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಿದ್ದ ಸಭೆಯಲ್ಲಿ ದೊಡ್ಡಬೆಳವಂಗಲ ಹೋಬಳಿ ವ್ಯಾಪ್ತಿಯ ಸಾರ್ವಜನಿಕರ ಕುಂದುಕೊರತೆ, ಸಮಸ್ಯೆಗಳ ಬಗ್ಗೆ ಮಾಹಿತಿ ಆಲಿಸಿದ ಸಿಇಒ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸೂಚಿಸಿದರು.



ಚುನಾವಣಾ ನೀತಿ ಸಂಹಿತೆ ಜಾರಿ ಇರುವುದರಿಂದ ಜನಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿಲ್ಲ. ಸಾರ್ವಜನಿಕರ ಅರ್ಜಿ ಸ್ವೀಕಾರಕ್ಕೆ ಇಲಾಖೆವಾರು ಕೌಂಟರ್‌ಗಳನ್ನು ತೆರೆಯಲಾಗಿದೆ. ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಸ್ವೀಕೃತಿವಾಗುವ ಅರ್ಜಿಗಳಿಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಎಂಡಾರ್ಸ್‌ಮೆಂಟ್(ಸ್ವೀಕೃತಿ ಪ್ರತಿ) ನೀಡಲಾಗುವುದು.

ಕಾನೂನು ವ್ಯಾಪ್ತಿಯಲ್ಲಿ ಬರುವ ಅರ್ಜಿಗಳನ್ನು 30 ದಿನದೊಳಗೆ ವಿಲೇವಾರಿ ಮಾಡಲು ಕ್ರಮ ವಹಿಸಲಾಗುತ್ತದೆ ಎಂದರು. ಪೋಡಿ, ಪಹಣಿ ತಿದ್ದುಪಡಿ, ಹಕ್ಕು ಪತ್ರ, ವಸತಿ, ನಿವೇಶನ, ಪಿಂಚಣಿ, ರೇಶನ್ ಕಾರ್ಡ್ ಸೇರಿದಂತೆ ಕಂದಾಯ, ಪಂಚಾಯತ್ ರಾಜ್ ಇಲಾಖೆಗಳಿಗೆ ಸಂಬಂಧಿಸಿದ ಅಹವಾಲುಗಳನ್ನು ಸಾರ್ವಜನಿಕರು ಸಲ್ಲಿಸಿದರು. ಸಭೆಯಲ್ಲಿ ಎಸಿ ಮಂಜುನಾಥ್, ಜಿ.ಪಂ ಉಪಕಾರ್ಯದರ್ಶಿ ಶಿವಕುಮಾರ್, ತಹಶೀಲ್ದಾರ್ ಮಲ್ಲಪ್ಪ, ಇಒ ಮಂಜುನಾಥ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಪ್ರತಿಭಟನೆಗೆ ಅನುಮತಿ ನಿರಾಕರಣೆ: ಪೊಲೀಸ್ ಠಾಣೆ ಎದುರೇ ಮಲಾರಪಾಳ್ಯ ಗ್ರಾಮಸ್ಥರ ಧರಣಿ

ಅ.ಶ. ಸುದ್ದಿ ಯಳಂದೂರು

**ಯಳಂದೂರು: ತಾಲೂಕಿನ ಮಲಾರಪಾಳ್ಯ ಗ್ರಾಮದ ಕರುವಿನಗುಡ್ಡದ ಬಳಿ ಇರುವ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿ ಅಹೋರಾತ್ರಿ ಧರಣಿ ನಡೆಸಲು ಅನುಮತಿ ನೀಡುವಂತೆ ಮನವಿ ಸಲ್ಲಿಸಿದ್ದರೂ, ಪೊಲೀಸರು ಅನುಮತಿ ನಿರಾಕರಿಸಿರುವುದನ್ನು ಖಂಡಿಸಿ ಗ್ರಾಮಸ್ಥರು ಗುರುವಾರ ರಾತ್ರಿ ಯಳಂದೂರು ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆ ನಡೆಸಿದರು.**

ಮಲಾರಪಾಳ್ಯ ಗ್ರಾಮದ ಕರುವಿನಗುಡ್ಡದ ಬಳಿ ಇರುವ ಸರ್ವೇ ನಂ.97ರಲ್ಲಿ ಒಟ್ಟು 48 ಎಕರೆ ಜಮೀನಿದೆ. ಈ ಜಮೀನಿನಲ್ಲಿ ಕೆಲವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಎರಡು ಎಕರೆ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿ ಖಾತೆ ಮಾಡಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.



ಸೆ.25ರಂದು ಬೆಳಿಗ್ಗೆ 10.30ಕ್ಕೆ ಮಲಾರಪಾಳ್ಯ ಗ್ರಾಮದ ಶಾಲಾ ಆವರಣದಿಂದ ಶಾಂತಿಯುತ ಮೆರವಣಿಗೆ ನಡೆಸಿ ಕರುವಿನಗುಡ್ಡದ ಬಳಿ ಅಹೋರಾತ್ರಿ ಧರಣಿ ನಡೆಸಲು ಗ್ರಾಮಸ್ಥರು ನಿರ್ಧರಿಸಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು.

ಆದರೆ ಸೆ.19ರಂದು ಪೊಲೀಸರು ನೀಡಿದ ಹಿಂಬರಹದಲ್ಲಿ, ಸದರಿ ಜಮೀನು ಬಗರ್ ಹುಕುಂ ಯೋಜನೆಯಡಿ ಸಾರ್ವಜನಿಕರಿಗೆ ಹಂಚಿಕೆಯಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ ಎಂದು ತಿಳಿಸಿದ್ದರು. ಅಲ್ಲದೆ ಗಣೇಶ ವಿಸರ್ಜನಾ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಮುಂದೂಡಿ, ಈ ಅವಧಿಯಲ್ಲಿ ತಾಲೂಕು ಆಡಳಿತದಿಂದ ಜಮೀನಿನ ಕುರಿತು ನಿಖರ ಮಾಹಿತಿ ಪಡೆದುಕೊಳ್ಳುವಂತೆ ಸೂಚಿಸಿದ್ದರು. ಮತ್ತೆ ಸೆ.24ರಂದು ಗ್ರಾಮಸ್ಥರು ಪ್ರತಿಭಟನೆಗೆ ಅನುಮತಿ ನೀಡುವಂತೆ ಮನವಿ ಸಲ್ಲಿಸಿದ್ದರು.

ಆದರೆ ಗಣೇಶ ವಿಸರ್ಜನೆ ಹಾಗೂ ಹಾಸನದಲ್ಲಿ ಬಂದೋಬಸ್ತ್ ಕರ್ತವ್ಯಕ್ಕೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿರುವುದರಿಂದ ಅಹೋರಾತ್ರಿ ಧರಣಿಗೆ ಸೂಕ್ತ ಬಂದೋಬಸ್ತ್ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿ ಪ್ರತಿಭಟನೆಯನ್ನು ಮುಂದೂಡುವಂತೆ ಪೊಲೀಸರು ಸೂಚಿಸಿದ್ದರು. ಈ ಕುರಿತು ಮಧುಮಾಲತಿ ಮಾತನಾಡಿ, ಕರುವಿನಗುಡ್ಡದಲ್ಲಿರುವ ಸರ್ಕಾರಿ ಜಮೀನನ್ನು ಕೆಲವರು ಕಬಳಿಸಿ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿ ಖಾತೆ ಮಾಡಿಸಿದ್ದಾರೆ ಎಂದು ಆರೋಪಿಸಿದರು. ಸರ್ಕಾರಿ ಜಮೀನನ್ನು ರಕ್ಷಿಸುವಂತೆ 20 ದಿನಗಳ ಹಿಂದೆಯೇ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಉತ್ತರ ದೊರೆತಿಲ್ಲ. ಪ್ರತಿಭಟನೆಗೆ ಅನುಮತಿ ಕೋರಿ ಪೊಲೀಸರಿಗೆ ಎರಡು ಬಾರಿ ಅರ್ಜಿ ಸಲ್ಲಿಸಿದ್ದರೂ ವಿವಿಧ ಕಾರಣಗಳನ್ನು ನೀಡಿ ಅನುಮತಿ ನಿರಾಕರಿಸಲಾಗುತ್ತಿದೆ ಎಂದು ದೂರಿದರು.

ಕೂಡಲೇ ಪ್ರತಿಭಟನೆಗೆ ಅನುಮತಿ ನೀಡಬೇಕು. ಇಲ್ಲವಾದರೆ ಸೆ.30ರಂದು ಕೊಳ್ಳೇಗಾಲಕ್ಕೆ ಮುಖ್ಯಮಂತ್ರಿ ಆಗಮಿಸುವ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಗ್ರಾಮದ ನಾಡಗೌಡ ಶಿವರುದ್ರಪ್ಪ, ವಿಶ್ವನಾಥ್, ಪ್ರದೀಪ್, ಪಂಜು, ಮಹೇಶ್, ಮಲ್ಲಯ್ಯ, ಮದನ್‌ಗೋಪಾಲ್ ಸೇರಿದಂತೆ ಹಲವರು ಭಾಗವಹಿಸಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka